**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |


# ಬೃಹಚ್ಚರಣ

**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – 25,000/- |
| ಪೋಷಕರು | – 5,000/- |
| ಸದಸ್ಯತ್ವ | – 1,000/- |
| ವಾರ್ಷಿಕ ನಿರ್ವಹಣೆ | – 250/- |

ಸಂಪುಟ : 4 ಸಂಚಿಕೆ : 3 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಜುಲೈ–ಅಕ್ಟೋಬರ್ 2014




ಅರ್ಪಣೆ

ಬೃಹಚ್ಚರಣ

**ಈ ಸಂಚಿಕೆಯನ್ನು ನಮ್ಮ ಜನಾಂಗದ ಹಿರಿಯ, ಸಮುದಾಯದ ಪುರೋಭಿವೃದ್ಧಿಗೆ ಶ್ರಮಿಸಿದ**

**ಧರ್ಮನಿರತ ಶ್ರೀ ಜಿ. ವೆಂಕಟರಮಣಯ್ಯ**

**ಅವರಿಗೆ**

**ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಿದೆ.**

## ಸಂಪಾದಕೀಯ

ಮಾನ್ಯರೆ,

"ಬೃಹಚ್ಚರಣ" ವಾರ್ತಾಪತ್ರಿಕೆಯು ಮೂರುವರ್ಷದ ಶೈಶವಾವಸ್ಥೆಯಿಂದ ಬಾಲ್ಯಕ್ಕೆ ಕಾಲಿಡುತ್ತಿದೆ. ಸಂಪಾದಕ ಮಂಡಳಿಯ ಮಾರ್ಗದರ್ಶನ ಹಾಗೂ ಸಂಘದ ಕಾರ್ಯಕಾರಿ ಸಮಿತಿಯ ಸಹಕಾರ ಸಂತೃಪ್ತಿ ತಂದಿದೆ. ಸಂಚಿಕೆಯು ಆಕರ್ಷಕವಾಗಿ ಮೂಡಿ ಬರುತ್ತಿರುವುದಕ್ಕೆ ತಾವು ನೀಡುತ್ತಿರುವ ಪ್ರೋತ್ಸಾಹವೇ ಕಾರಣ. ಸಹಕರಿಸುತ್ತಿರುವವರಿಗೆಲ್ಲಾ ವಂದನೆಗಳು.

ನಿಮ್ಮವ

■ ಕೆ.ಸಿ. ನಟರಾಜನ್
ಸಂಪಾದಕ
9845113475

**ಸಂಘಕ್ಕೆ ಸದಸ್ಯರ ಸೇರಿಸಿ,**
**ಬೃಹಚ್ಚರಣ ಬಳಗ ಬೆಳಸಿ**

## ಅಭಿನಂದನೆ

ಸಂಘದ ಹಿರಿಯ ಸದಸ್ಯರಾದ ಶ್ರೀ **ಕೆ.ಸಿ. ಶೇಖರ್**ರವರು ಸಂಘದ ಅಭಿವೃದ್ಧಿಗಾಗಿ **25,000/–** ರೂ.ಗಳನ್ನು ನೀಡಿ ಸಂಘದ ಮಹಾ ಪೋಷಕರಾಗಿರುವುದಕ್ಕೆ ಕಾರ್ಯಕಾರಿ ಸಮಿತಿಯು ಅಭಿನಂದಿಸುತ್ತದೆ.

**"ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು"**

## ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ, ನಮಸ್ಕಾರ.

ಮುಂಬರುವ ದೀಪಾವಳಿ ಹಬ್ಬಕ್ಕೆ ಸಂಘದ ಎಲ್ಲಾ ಸದಸ್ಯರಿಗೆ ಹಾಗೂ ಅವರ ಕುಟುಂಬದವರಿಗೆ ಶುಭ ಹಾರೈಸುತ್ತೇನೆ. ತಮ್ಮ ಸಲಹೆಯಂತೆ ಸಂಘದಿಂದ ಒಂದು ದಿನದ ಪ್ರವಾಸ, ದಿನಾಂಕ: 21–09–14 ಹಾಸನ ಜಿಲ್ಲೆಯ ರಾಮನಾಥಪುರಕ್ಕೆ ಹಮ್ಮಿಕೊಂಡಿದ್ದು, ಸಮುದಾಯದ ನೂರಾರು ಸದಸ್ಯರು ಕುಟುಂಬದೊಂದಿಗೆ ಭಾಗವಹಿಸಿ ಸಂತೋಷ ಹಂಚಿಕೊಂಡಿದ್ದು ಮನ ಮುಟ್ಟುವಂತಿತ್ತು. ಕ್ಷೇತ್ರ ದರ್ಶನದೊಂದಿಗೆ, ಮನರಂಜನೆಯೂ ಕೂಡಿದ್ದು ಆಯೋಜಕರಿಗೆ ಸಂತಸ ತಂದಿತ್ತು.

**ವಾರ್ಷಿಕ ನಿರ್ವಹಣಾ ವೆಚ್ಚ ರೂ. 250/–** ಸಂದಾಯಿಸಿದ ಸದಸ್ಯರೆಲ್ಲರಿಗೂ ವಂದನೆ ಹಾಗೂ ಆದಷ್ಟು ಬೇಗ ಇತರರು ಸಂದಾಯಿಸಬೇಕೆಂದು ನನ್ನ ಕೋರಿಕೆ.

ಸದಸ್ಯತ್ವದಿಂದ ಪೋಷಕರಾಗಲು ನೀಡಿದ ಅವಕಾಶವನ್ನು ಸದುಪಯೋಗಪಡಿಸಿ ಕೊಳ್ಳುತ್ತಿರುವ ಸದಸ್ಯರಿಗೆ ಮತ್ತು ಅವರು ಸಂಘದ ಮೇಲಿಟ್ಟಿರುವ ವಿಶ್ವಾಸಕ್ಕೆ ಕಾರ್ಯಕಾರಿ ಸಮಿತಿ ಪರವಾಗಿ ಅಭಿನಂದಿಸುತ್ತೇನೆ.

ಡಿಸೆಂಬರ್ 25, 2014ರ ಗುರುವಾರ ತಮ್ಮೆಲ್ಲರ ಅಪೇಕ್ಷೆಯಂತೆ ಹಿಂದಿನ ವರ್ಷದಂತೆ ನಾಗೇಶ್ವರ ಕ್ಷೇತ್ರ, ಕಿತ್ತಿಗಾನಹಳ್ಳಿಯಲ್ಲಿ **"ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ"** ಏರ್ಪಡಿಸಿರುತ್ತದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಸಂಘದ ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿ, ಟಿ.ಎಸ್.ಮಣಿ ಹಾಗೂ ಎಸ್. ಸತ್ಯನಾರಾಯಣರವರ ಮುಂದಾಳತ್ವದಲ್ಲಿ ನಡೆಯುವ ಈ ಸಮಾರಂಭಕ್ಕೆ ತಮ್ಮೆಲ್ಲರನ್ನು ಸ್ವಾಗತಿಸುತ್ತಾ, ಪೂಜಾ ಕೈಂಕರ್ಯದಲ್ಲಿ ಭಾಗವಹಿಸುವ ದಂಪತಿಗಳು ಈ ಕೂಡಲೇ ತಮ್ಮ ಹೆಸರುಗಳನ್ನು ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ಯಾರಿಗಾದರೂ ತಿಳಿಸಿ, ರೂ. 2,500/– ಪಾವತಿಸಿ, ನೋಂದಾಯಿಸಲು ಕೋರಿಕೆ. ಮುಂಬರುವ ದಿನಗಳಲ್ಲಿ ಸಂಘವು ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲು ತಮ್ಮ ಉತ್ತಮ ಸಲಹೆಗಳನ್ನು ಸ್ವಾಗತಿಸುತ್ತೇನೆ.


"ಬೃಹಚ್ಚರಣ" ವಾರ್ತಾ ಪತ್ರಿಕೆಗೆ ಮೂರುವರ್ಷ ತುಂಬಿರುವ ಈ ಸಂದರ್ಭದಲ್ಲಿ ಲೇಖನಗಳನ್ನು ಕಳಿಸುತ್ತಿರುವವರಿಗೆ ವಂದನೆಗಳು ಹಾಗೂ ಸಮುದಾಯದವರಿಂದ ಪೂರ್ಣ ಸಹಕಾರ ಮುಂದೆಯೂ ನಿರೀಕ್ಷಿಸುತ್ತಿದ್ದೇನೆ,

ತಮ್ಮೆಲ್ಲರಿಗೂ ಶುಭವಾಗಲಿ, ಶುಭವಾಗುತ್ತದೆ.




**ತಮ್ಮವ,**

■ **ಎಸ್. ಸೋಮಸುಂದರ**





**ಹಾಸನ ಜಿಲ್ಲೆ ರಾಮನಾಥಪುರದ ಶ್ರೀ ಸುಬ್ರಮಣ್ಯಸ್ವಾಮಿಯ ಪ್ರಾಕಾರೋತ್ಸವ 21–9–2014**

## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ, 9900113298** |
| ಉಪಾಧ್ಯಕ್ಷರು | : | **ಕೆ.ಬಿ. ಮುರಳಿ, 9448044164** |
| | | **ಕೆ. ಮಂಜುನಾರಾಯಣ್, 9886114279** |
| ಕಾರ್ಯದರ್ಶಿ | : | **ವಿ.ಎಸ್. ಮಣಿ, 9845055582** |
| ಸಹಕಾರ್ಯದರ್ಶಿ | : | **ವಿ. ಅರುಣ, 9880166001** |
| ಖಜಾಂಚಿ | : | **ಎಸ್. ಸತ್ಯನಾರಾಯಣ, 9980945699** |
| ಲೆಕ್ಕಪರಿಶೋಧಕರು | : | **ಎಚ್.ಕೆ. ಶಶಿಧರ್, 9845173766** |

ಸದಸ್ಯರು : **ಆರ್.ಎ. ಈಶ್ವರನ್, ಟಿ.ಎಸ್. ಮಣಿ, ಎಸ್. ಶ್ರೀನಿವಾಸನ್, ಆರ್. ಗೋಪಾಲಕೃಷ್ಣ, ಎಸ್. ಸಿ. ಶ್ರೀನಿವಾಸ, ಬಿ. ಶ್ರೀಧರ್, ಕೆ. ಜಿ. ವೆಂಕಟೇಶ್, ಸರಸ್ವತಿ ನಟರಾಜನ್, ಎ.ವಿ. ಮಂಜುನಾಥ, ಟಿ.ಪಿ. ಸೂರ್ಯನಾರಾಯಣ, ಆರ್. ಗಣೇಶ ಶ್ರೀಧರ್, ಟಿ.ಎಸ್. ನಾಗೇಶ್, ಟಿ.ಎಸ್. ರಮೇಶ್, ಕೆ.ಸಿ. ನಟರಾಜನ್, ಬಿ. ಸುಬ್ರಹ್ಮಣ್ಯಂ**



## ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ

ಬೃಹಚ್ಚರಣ ಸಂಘದ ಅನೇಕ ಸದಸ್ಯರ ಅಪೇಕ್ಷೆಯಂತೆ ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ಈ ವರ್ಷದ ಡಿಸೆಂಬರ್ 25ನೇ ತಾರೀಖು ಗುರುವಾರ ಶ್ರೀ ಶ್ರೀನಿವಾಸ ದೇವರ ಕಲ್ಯಾಣೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವೇ. ಬ್ರ. ಶ್ರೀ ನಂಜುಂಡ ದೀಕ್ಷಿತರು ಹಾಗೂ ಅವರ ಸೋದರರ ನೇತೃತ್ವದಲ್ಲಿ ಭೂದೇವಿ ಹಾಗೂ ನೀಳಾದೇವಿ ಸಮೇತ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ. ಬೃಹಚ್ಚರಣ ಬಂಧುಗಳು ಕುಟುಂಬ ಸಮೇತ ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ಅರಿಕೆ ಮಾಡಿಕೊಳ್ಳುತ್ತಿದ್ದೇವೆ.

ಈ ಸಾಮೂಹಿಕ ಕಲ್ಯಾಣೋತ್ಸವದಲ್ಲಿ ಕರ್ತೃಗಳಾಗಿ ಪಾಲ್ಗೊಳ್ಳಲು ಇಚ್ಛಿಸುವ ದಂಪತಿಗಳು ರೂ. 2500/–ಗಳನ್ನು ನವೆಂಬರ್ 25ರ ಒಳಗಾಗಿ ಸಂಘದ ಯಾವ ಪದಾಧಿಕಾರಿಗಳಿಗಾದರೂ ನಗದು ಅಥವಾ ಚೆಕ್ ಮೂಲಕ ಪಾವತಿಸಿ ನೋಂದಾಯಿಸಿಕೊಳ್ಳತಕ್ಕದ್ದು.

**ಅಧ್ಯಕ್ಷರು**
ಕಾರ್ಯಕಾರಿ ಸಮಿತಿ ಪರ

ಮೊಬೈಲ್: 99001 13298, 98450 55582, 9980945699



## 'ಧರ್ಮನಿರತ'
## ಶ್ರೀ ಗುಂಜೂರು ವೆಂಕಟರಮಣಯ್ಯ

ದೀನದಲಿತರ ಸೇವೆ, ತ್ಯಾಗ ಮನೋಭಾವನೆ, ದಾನ, ಧರ್ಮಗಳನ್ನು ಗುರುತಿಸಿ ಮೆಚ್ಚಿಕೊಂಡ, ಮೈಸೂರು ಸಂಸ್ಥಾನವನ್ನು ಆಳಿದ ಮಹಾರಾಜರಾದ ಶ್ರೀಕೃಷ್ಣರಾಜ ಒಡೆಯರವರಿಂದ 'ಧರ್ಮನಿರತ' ಬಿರುದಿನೊಂದಿಗೆ ಜೋಡಿ ಶಾಲು, ಕಂಠೀಹಾರಗಳಿಂದ ಸನ್ಮಾನಿತರಾದ ನಮ್ಮ ಸಮುದಾಯದ ಈ ಹಿರಿಯರಿಗೆ ಈ ಸಂಚಿಕೆ ಅರ್ಪಿತ.

ಗುಂಜೂರು ವೆಂಕಟರಮಣಯ್ಯನವರು 1860ರಲ್ಲಿ ಜನಿಸಿ ಬಾಲ್ಯದಲ್ಲಿಯೇ ತಂದೆ–ತಾಯಿಗಳನ್ನು ಕಳೆದುಕೊಂಡು, ಮಾವ ಬಿದರಗೆರೆ ಶ್ರೀರಾಮಸ್ವಾಮಯ್ಯನವರ ಆಶ್ರಯದಲ್ಲೇ ಬೆಳೆದರು. ಬೆಂಗಳೂರು ಸಿಟಿ ಗಾಣಿಗರ ಪೇಟೆಯಲ್ಲಿ ನೆಲೆಸಿ, ವಕೀಲ ವೃತ್ತಿಯನ್ನು ಕೈಗೊಂಡು ಸಿವಿಲ್ ಕೇಸುಗಳಲ್ಲೇ ಉತ್ತಮ ವಕೀಲರೆಂದು ಹೆಸರು ಪಡೆದಿದ್ದರು. ಬೆಂಗಳೂರಿನ ರಾಮಕೃಷ್ಣ ಆಶ್ರಮ, ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರ, 'ರಾಮಕೃಷ್ಣ ಕೃಷಿ ಶಾಲೆ' ಮುಂತಾದ ಕಡೆಗಳಲ್ಲಿ ನೀಡಿರುವ ದಾನ ಚಿರಸ್ಮರಣೀಯ. ಬಿದರಗೆರೆ ಕುಟುಂಬದವರಿಂದ ಕಿತ್ತಿಗಾನಹಳ್ಳಿ ನಾಗಾರಾಧನೆಗೆ ಅಮೂಲ್ಯವಾದ ದತ್ತಿ ಕೊಡಿಸಿದ್ದಲ್ಲದೇ, ಆನೇಕಲ್ಲು ತಿಮ್ಮರಾಯಸ್ವಾಮಿ ದೇವಸ್ಥಾನಕ್ಕೆ, ಶಂಕರಮಠಗಳಿಗೆ ಪುದುವಟ್ಟುಗಳನ್ನು ಇಟ್ಟಿದ್ದಾರೆ. ಶ್ರೀಯುತರು ರಾಮಕೃಷ್ಣ ಪರಮಹಂಸರ ಪರಮಭಕ್ತರು, ಭಿಕ್ಷುಕರಿಗೆ ಭಿಕ್ಷೆ ನೀಡುವಾಗ ಕೂಡಾ 'ರಾಮಕೃಷ್ಣ' ಎಂದು ಹೇಳಿಸಿ ಭಿಕ್ಷೆ ಹಾಕುತ್ತಿದ್ದರು. ಅಂತೆಯೇ, ಶ್ರೀ ಆಂಜನೇಯನ ಪರಮಭಕ್ತರು, ರಾಮಕೃಷ್ಣಪುರ ಮತ್ತು ಕಾಚನಾಯಕಹಳ್ಳಿ ಗ್ರಾಮಗಳಲ್ಲಿ ಆಂಜನೇಯಸ್ವಾಮಿ ದೇವಾಲಯಗಳನ್ನು ನಿರ್ಮಿಸಿ, ಅವುಗಳ ಪೂಜೆಗಾಗಿ ದತ್ತಿ ಜಮೀನುಗಳನ್ನು ಬಿಟ್ಟಿರುತ್ತಾರೆ.

ಬೃಹಚ್ಚರಣ ಬಂಧುಗಳಿಗೆ ಭೂ ವ್ಯವಸಾಯವೇ ಪ್ರಧಾನ ಕಸುಬಾಗಿ ಇದ್ದುದರಿಂದ ಗ್ರಾಮಗಳಿಂದ ಪಟ್ಟಣಕ್ಕೆ ವಲಸೆ ಹೋಗದೆ, ಗ್ರಾಮಗಳಲ್ಲೇ ಭೂ ಅಭಿವೃದ್ಧಿಪಡಿಸಿ ಸ್ವಾವಲಂಬಿಗಳಾಗಬೇಕೆಂಬ ಹಂಬಲದಿಂದ ರಾಮಕೃಷ್ಣಪುರದಲ್ಲಿ ಕೃಷಿ ಶಾಲೆ ಮತ್ತು ಉಚಿತ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿ ಗುರು ರಾಮಕೃಷ್ಣ ಪರಮಹಂಸರ ಹೆಸರಿಟ್ಟರು. ಕೃಷಿ ಶಾಲೆಗೆ ಸೇರಿದಂತೆ ಫಲ–ಪುಷ್ಪ ಕೇಂದ್ರಕ್ಕೆ ಧನ ಸಹಾಯ ಮಾಡಿರುತ್ತಾರೆ.

ದೀನ ದಲಿತರ ರೋಗಿಗಳ ಚಿಕಿತ್ಸೆ ಮತ್ತು ಶುಶ್ರೂಷೆಗಾಗಿ ತಮ್ಮ ಮನೆಯ ಒಂದು ಭಾಗದಲ್ಲೇ ವೈದ್ಯಾಲಯ ನಡೆಸಲು ಒಬ್ಬ ವೈದ್ಯರಿಗೆ ಅನುಕೂಲ ಮಾಡಿ ಕೊಟ್ಟಿದ್ದರು. ತಾವೂ ತಮ್ಮ ಧರ್ಮಪತ್ನಿ ಅಮ್ಮಣ್ಣಮ್ಮನವರು ಕಾಲವಾದ ನಂತರ ತಮ್ಮ ಮನೆಯಲ್ಲೇ ನಮ್ಮವರಿಗಾಗಿ ಉಚಿತ ವಿದ್ಯಾರ್ಥಿನಿಲಯ ಆರಂಭಿಸಬೇಕೆಂದು ಉದ್ದೇಶಪಟ್ಟಿದ್ದರು. ಅಂತೆಯೇ ಇದರ ಮೇಲ್ವಿಚಾರಣೆಗಾಗಿ ಒಂದು ಧರ್ಮದರ್ಶಿ ಮಂಡಳಿ ಕೂಡ ಸ್ಥಾಪಿತವಾಯಿತು. ಕಾರಣಾಂತರಗಳಿಂದ ಇದು ಸ್ಥಗಿತಗೊಂಡಿದ್ದು ದುರ್ದೈವವೆಂದೇ ಹೇಳಬೇಕು.

ಶ್ರೀ ವೆಂಕಟರಮಣಯ್ಯ ಮತ್ತು ಅಮ್ಮಣ್ಣಮ್ಮನವರಿಗೆ ನಮ್ಮ ನಮಸ್ಕಾರಗಳು.

**–ಸಂ.**

*ಮೂಲ: **ಗುಂಜೂರು ವೇಣುಗೋಪಾಲ್***

# ಸಂಘದ 21–09–2014ರ ಪ್ರವಾಸದ ಚಿತ್ರಗಳು



















ಛಾಯಾಚಿತ್ರ : ನಟರಾಜ್ – ಶಿವಕುಮಾರ್



# ರಾಮನಾಥಪುರ ಪ್ರವಾಸ ಇಣಕು ನೋಟ

*21 ಸೆಪ್ಟೆಂಬರ್ ರಂದು ಜರುಗಿದ ಮೈ. ಮಂ. ದ್ರಾ. ಸಂಘದ ರಾಮನಾಥಪುರಪುಣ್ಯ ಕ್ಷೇತ್ರ ಪ್ರವಾಸದ ಬಗ್ಗೆ ವರದಿ*

ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘವು ಹಿಂದಿನ ವರ್ಷದಂತೆ ಈ ವರ್ಷವೂ ಭಾನುವಾರ ಸೆಪ್ಟೆಂಬರ್ 21ರಂದು ಒಂದು ದಿನದ ಪ್ರವಾಸವನ್ನು ಏರ್ಪಡಿಸಿತ್ತು. ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಕಾವೇರಿ ನದಿ ತೀರದಲ್ಲಿರುವ ರಾಮನಾಥಪುರವನ್ನು ಪ್ರವಾಸಕ್ಕಾಗಿ ಆಯ್ದುಕೊಳ್ಳಲಾಗಿತ್ತು. ಸಂಘದ ಸದಸ್ಯರು ಕುಟುಂಬ ಸಮೇತ ಪಾಲ್ಗೊಂಡಿದ್ದರು.

ಈ ಬಾರಿ ಪ್ರವಾಸದಲ್ಲಿ ಭಾಗವಹಿಸಿದ ಸದಸ್ಯರ ಸಂಖ್ಯೆ ಕಳೆದಬಾರಿಗಿಂತ ಮೂರರಷ್ಟು ಹೆಚ್ಚಾಗಿ ಇದ್ದದ್ದು ಒಂದು ಗಮನಾರ್ಹ ಬೆಳವಣಿಗೆ. 100ರಷ್ಟು ಸಂಖ್ಯೆಯಲ್ಲಿದ್ದ ನಮ್ಮ ಸಮುದಾಯದವರನ್ನು ಕರೆದೊಯ್ಯಲು ಅನುಕೂಲವಾಗುವಂತೆ 3 ಬಸ್ಸುಗಳ ವ್ಯವಸ್ಥೆ ಮಾಡಲಾಗಿತ್ತು.

ಬಸ್ಸುಗಳಿಗೆ ಪೂಜೆ, ಪ್ರಾರ್ಥನೆಯ ನಂತರ ಅಧ್ಯಕ್ಷರು ಪ್ರವಾಸಿ ಸದಸ್ಯರಿಗೆ ಸ್ವಾಗತ ಬಯಸಿದರು. ಪ್ರವಾಸದ ನಿಯೋಜಕರು ಪ್ರತಿ ಬಸ್ಸಿನಲ್ಲಿ ಪ್ರಯಾಣಿಸಬೇಕಾದವರ ಪಟ್ಟಿಯನ್ನೂ ತಯಾರಿಸಿದ್ದರಿಂದ ಗಡಿಬಿಡಿ, ವಿಳಂಬವಿಲ್ಲದೆ ಎಲ್ಲರೂ ಬಸ್ ಹತ್ತಿಕೊಂಡದ್ದಾಯಿತು.

ಪ್ರವಾಸದ ನಿಯೋಜಕರಾದ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ಮೂರು ಬಸ್‌ಗಳ ಮೇಲುಸ್ತುವಾರಿಯನ್ನು ತಮ್ಮಲ್ಲೇ ಹಂಚಿಕೊಂಡಿದ್ದರು. ಪ್ರವಾಸದ ನಿಯೋಜಕರು ಮುಂದಾಲೋಚನೆಯಿಂದ ಪ್ರಥಮ ಚಿಕಿತ್ಸಾನೀಡಿಕೆಗೂ ತಯಾರಾಗಿದ್ದರು.

ಪ್ರಯಾಣದ ಸಮಯದಲ್ಲಿ ಮೂರೂ ಬಸ್‌ಗಳ ಬಂಧು ಮಿತ್ರರು ಭಜನೆ, ಹಾಡು, ಹರಟೆ ಆಟಗಳಲ್ಲಿ ತೊಡಗಿಸಿಕೊಂಡು ದಾರಿ ಸವೆಸಿದರು.

ತಂಡವು ಮಧ್ಯಾಹ್ನ ಒಂದು ಘಂಟೆಗೆ ರಾಮನಾಥಪುರ ಕ್ಷೇತ್ರ ತಲುಪಿ ಅಲ್ಲಿನ ಶ್ರೀ ಸುಬ್ರಹ್ಮಣ್ಯೇಶ್ವರ ದೇವಾಲಯದ ಪ್ರಾಕಾರೋತ್ಸವದಲ್ಲಿ ಪಾಲ್ಗೊಂಡಿತು. ಉತ್ಸವ ನಂತರದ ಪೂಜೆ ಮಂಗಳಾರತಿಯು ಎಲ್ಲರಲ್ಲಿಯೂ ಧನ್ಯತಾ ಭಾವ ಮೂಡಿಸುವಂತಿತ್ತು. ನಂತರ ಸದಸ್ಯರೆಲ್ಲರೂ ಪ್ರಸಾದರೂಪ ಭೋಜನವನ್ನು ಸ್ವೀಕರಿಸಿದರು.

ಪ್ರವಾಸದ ಆಕರ್ಷಣೆಯಾದ ಕಾವೇರಿ ನದಿಯಲ್ಲಿ ಸಾಕಷ್ಟು ನೀರು ಹರಿಯುತ್ತಿತ್ತು. ಅನೇಕರು ನೀರಿಗಿಳಿದರು. ಕೆಲವರು ನದಿಯಲ್ಲಿ ಮಿಂದು ಪಾವನರಾದರು. ಇನ್ನು ಕೆಲವರು ಕೈಕಾಲು ಮುಖತೊಳೆದು ತೃಪ್ತರಾದರು. ನೀರಿಗಿಳಿಯದ ಹಿರಿಯರು ನೀರಿನಲ್ಲಿ ಕುಣಿದು ಕುಪ್ಪಳಿಸುತ್ತಿದ್ದವರನ್ನು ಎಚ್ಚರಿಸುತ್ತಿದ್ದರು. ಮಕ್ಕಳು, ಹಿರಿಯರು ವಯೋಭೇದವಿಲ್ಲದೇ ತಣ್ಣನೆಯ ನೀರಿನಲ್ಲಿ ಮನಸೋ ಇಚ್ಛೆ ವಿಹರಿಸಿದರು.

ಇದಾದ ಮೇಲೆ ಸದಸ್ಯರು ಕ್ಷೇತ್ರದ ಇತರ ದೇವಾಲಯಗಳಾದ ಶ್ರೀ ಪಟ್ಟಾಭಿರಾಮ, ಶ್ರೀ ಆಂಜನೇಯ, ಶ್ರೀ ಅಗಸ್ತ್ಯೇಶ್ವರ ದೇವಾಲಯಗಳಿಗೆ ತೆರಳಿ ಅಲ್ಲಿ ಪೂಜೆ, ಪ್ರಾರ್ಥನೆಗಳನ್ನು ಸಲ್ಲಿಸಿದರು.

ದೇವಾಲಯದಲ್ಲೇ ಸಿದ್ಧಪಡಿಸಿದ್ದ ರಾತ್ರಿಯೂಟದ ಸಮೇತ ಎಲ್ಲರೂ ಬಸ್ಸುಗಳನ್ನು ಹತ್ತಿಕೊಂಡರು. ವಾಪಸ್ಸು ಪ್ರಯಾಣದಲ್ಲಿ ದಾರಿಯುದ್ದಕ್ಕೂ ಸದಸ್ಯರ ನಡುವೆ ಅಂದಿನ ಅನುಭವಗಳ ವಿನಿಮಯ, ಹರಟೆ ಸಾಗಿತು.

ರಾತ್ರಿ 8:30 ರ ಹೊತ್ತಿಗೆ ಯಡಿಯೂರು ಸಮೀಪ ಬಸ್ಸುಗಳು ನಿಂತಾಗ ಸಂಘದ ಅಧ್ಯಕ್ಷರು ಪ್ರವಾಸದಲ್ಲಿ ಭಾಗವಹಿಸಿ ಸಹಕರಿಸಿದವರಿಗೆಲ್ಲಾ ಧನ್ಯವಾದಗಳನ್ನು ಅರ್ಪಿಸಿದರು. ಶ್ರೀ ರಮೇಶನ್ ಅವರು ಸಂಘದ ಪರವಾಗಿ ಪ್ರವಾಸವನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಸದಸ್ಯರನ್ನೂ ಅವರ ಕುಟುಂಬ ವರ್ಗದವರನ್ನೂ ಅಭಿನಂದಿಸಿದರು. ನಂತರ ತಂಡವು ಪ್ರಯಾಣದ ಕೊನೆಯ ಘಟ್ಟ ಮುಗಿಸಿ ರಾತ್ರಿ ಬೆಂಗಳೂರು ತಲುಪಿತು.

ಈ ಪ್ರವಾಸದ ವೈಶಿಷ್ಟ್ಯವೆಂದರೆ, ಭಾಗವಹಿಸಿದ ಸದಸ್ಯರೆಲ್ಲರೂ ತೋರಿದ ಸಮಯ ಪ್ರಜ್ಞೆ, ಮುಂಜಾನೆ ನಿಗದಿತ ಸಮಯಕ್ಕೆ ಪ್ರತಿಯೊಬ್ಬರೂ ಬಂದು ಸೇರಿದ್ದು ಅಲ್ಲದೇ ಪ್ರವಾಸದಲ್ಲಿ ಸಮಯದ ಬಗ್ಗೆ ಪ್ರತಿಯೊಬ್ಬರೂ ತೋರಿದ ಕಾಳಜಿ ಪ್ರವಾಸದ ಯಶಸ್ಸಿಗೆ ಮುಖ್ಯ ಕಾರಣ.

ಒಟ್ಟಾರೆ ಈ ಪ್ರವಾಸವು ಸಂತೋಷಕರ ವಾಗಿತ್ತಲ್ಲದೆ ಇನ್ನು ಮುಂದೆ ಪ್ರವಾಸಗಳನ್ನು ಏರ್ಪಡಿಸಲು ಸ್ಫೂರ್ತಿದಾಯಕವಾಗಿದೆ.

■ **ಆರ್. ರಮೇಶ್**
98860 34048







# ಕ್ಷೇತ್ರ ಪ್ರವಾಸ - ನನ್ನನಿಸಿಕೆ

**ಧ್ಯೇಯೇತ್ ಷಣ್ಮುಖಮಿಂದು ಕೋಟಿ ಸದೃಶಂ ರತ್ನಪ್ರಭಾ ಶೋಭಿತಂ ।**
**ಬಾಲಾರ್ಕದ್ಯುತಿ ಷಟ್ಕಿರೀಟವಿಲಸತ್ಕೇಯೂರಹಾರಾನ್ವಿತಂ ।**
**ಕರ್ಣಾಲಂಬಿತಕುಂಡಲ ಪ್ರವಿಲಸದ್ಗಂದಸ್ಥಳಾ ಶೋಭಿತಂ ।**
**ಕಿಂಬಿತ್ಕಂಕಣ ಕಿಂಕಿಣೀರವಯುತಂ ಶೃಂಗಾರ ಸಾರೋದಯಂ ॥**

ತಾ॥ 21–9–2014 ರಂದು ಸಂಘದ ವತಿಯಿಂದ ರಾಮನಾಥಪುರ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆಯಲ್ಲಿರುವ ಶ್ರೀ ಸುಬ್ರಮಣ್ಯಸ್ವಾಮಿ ದೇವಸ್ಥಾನಕ್ಕೆ ಪ್ರವಾಸವನ್ನು ಏರ್ಪಡಿಸಿದ್ದರು. ರಾಮನಾಥಪುರವು ಕಾವೇರಿ ನದಿಯ ಎಡ ದಂಡೆ ತೀರದಲ್ಲಿದೆ. ಕರ್ನಾಟಕದಲ್ಲಿ ಪ್ರಸಿದ್ಧವಾದ ಈ ಸ್ಥಳಕ್ಕೆ 'ದಕ್ಷಿಣ ಕಾಶಿ' (Dakshina Kashi) ಎಂದು ಕರೆಯುತ್ತಾರೆ. ಇಲ್ಲಿರುವ ಪ್ರಸನ್ನ ಶ್ರೀ ಸುಬ್ರಮಣ್ಯಸ್ವಾಮಿ ದೇವಸ್ಥಾನ, ಶ್ರೀ ಅಗಸ್ತ್ಯೇಶ್ವರ ದೇವಸ್ಥಾನ, ಶ್ರೀ ರಾಮೇಶ್ವರ ದೇವಸ್ಥಾನ ಮತ್ತು ಶ್ರೀ ಪಟ್ಟಾಭಿರಾಮ ದೇವಸ್ಥಾನ 8ನೇ ಶತಮಾನಕ್ಕೂ ಹೆಚ್ಚಿನ ಕಾಲದ ಪುರಾತನ ಮತ್ತು ಪ್ರಸಿದ್ಧವಾದ ದೇವಾಲಯಗಳು.

ಬೆಳಗ್ಗೆ 7.00 ಗಂಟೆಗೆ ಸರಿಯಾಗಿ ಸುಮಾರು 100 ಮಂದಿ ಸದಸ್ಯರು ಮತ್ತು ಕುಟುಂಬದವರು ಭಾಗಿಯಾಗಿದ್ದ ಸಮೂಹ, ಮೂರು ಬಸ್ಸಿನಲ್ಲಿ ಬೆಂಗಳೂರಿನಿಂದ ಪ್ರಯಾಣ ಬೆಳಸಿದೆವು.

ಪ್ರವಾಸದಲ್ಲಿ ಬೆಳಗಿನ ಉಪಹಾರಕ್ಕೆ ರುಚಿಯಾದ ಮತ್ತು ಪೌಷ್ಟಿಕವಾದ ಕೇಸರಿಬಾತ್, ಖಾರಾಬಾತ್, ಆಂಬೊಡೆ ಮತ್ತು ಚಟ್ನಿ. ಕೆಲ ಸಮಯದ ನಂತರ ಸಿಹಿ ಮತ್ತು ಖಾರದ ತಿನಸುಗಳು ಬಂದವು. ದಾರಿಯುದ್ದಕ್ಕೂ ಮಕ್ಕಳ ಸುಮಧುರ ಸಂಗೀತ ಕೇಳುತ್ತಿತ್ತು.



ಸುಮಾರು 12.00 ಗಂಟೆಗೆ ರಾಮನಾಥಪುರವನ್ನು ತಲುಪಿದೆವು. ನೇರವಾಗಿ ಪ್ರಸನ್ನ ಶ್ರೀ ಸುಬ್ರಮಣ್ಯೇಶ್ವರನ ದರ್ಶನಕ್ಕೆ ಹೊರಟೆವು. ಅಲ್ಲಿ ಸಂಘದ ವತಿಯಿಂದ ವಿಶೇಷ ಪೂಜೆ ಏರ್ಪಡಿಸಲಾಗಿತ್ತು. ಪೂಜೆಗಳೆಲ್ಲಾ ಕುಕ್ಕೆಯ ಶ್ರೀ ಸುಬ್ರಮಣ್ಯಸ್ವಾಮಿ ದೇವಸ್ಥಾನದ ರೀತಿಯಲ್ಲೇ ನಡೆಯುತ್ತದೆ ಮತ್ತು ಅಲ್ಲಿನ ತರಹವೇ ಮೂಲ ವಿಗ್ರಹ ಕೂಡ ಇದೆ. ದರ್ಶನದ ನಂತರ ದೇವರ ಉತ್ಸವ ನಡೆಯಿತು. ಆಮೇಲೆ ವಿಶೇಷ ಪೂಜೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ. ಎಲ್ಲರೂ ಖುಷಿಯಿಂದ ಭಾಗಿಯಾಗಿದ್ದರು. ನಂತರ ಇತರ ದೇವಸ್ಥಾನಗಳ ದರ್ಶನ.

ಸುಮಾರು 2.00 ಗಂಟೆಗೆ ದೇವಸ್ಥಾನದ ಆವರಣದಲ್ಲಿ ರುಚಿಯಾದ ಭೋಜನ–ಅನ್ನ, ಸಾರು, ಪಲ್ಯ, ಕೋಸಂಬರಿ, ಹುಳಿ, ಪಾಯಸ, ಮೈಸೂರು ಪಾಕ್, ಬೊಂಡ, ಮಜ್ಜಿಗೆ. ನಂತರ ಎಲ್ಲರೂ ಕಾವೇರಿ ನದಿಯ ಕಡೆ ನಡಿಗೆಯಲ್ಲಿ ಪಯಣ. ಅಲ್ಲಿ ಪ್ರತಿಯೊಬ್ಬರೂ ನೀರಿನಲ್ಲಿ ಮುಳುಗಿ, ಆಡಿ, ನಲಿದು ಎರಡು ಗಂಟೆ ಕಾಲ ಸಮಯವನ್ನು ಕಳೆದು ವಿಶ್ರಮಿಸಿಕೊಂಡರು. ಬಸ್ಸಿನ ಹತ್ತಿರ ಎಲ್ಲರಿಗೂ ಸಲೆಡ್ ವಿತರಣೆ, ಕಾಫಿ ವಿತರಣೆ, ಮಾತುಕತೆ ಇತ್ಯಾದಿ.


ಸಂಜೆ 5.00 ಗಂಟೆಗೆ ರಾಮನಾಥಪುರವನ್ನು ಬಿಟ್ಟು ಬೆಂಗಳೂರಿನ



ಕಡೆಗೆ ಹೊರಟೆವು. ದಾರಿಯಲ್ಲಿ ರಾತ್ರಿಗೆಂದು ಬಿಸಿಬೇಳೆ ಬಾತ್, ಮೊಸರನ್ನ ಮತ್ತು ಅದರ ಜೊತೆಗೆ ಸಾಲದೆಂದು ಬಿಸ್ಕತ್ತು, ಸಿಹಿ ಮತ್ತು ಖಾರದ ತಿನಸುಗಳು. ಮಧ್ಯದಲ್ಲಿ ಬಸ್ಸುಗಳನ್ನು ನಿಲ್ಲಿಸಿ ವಿಶ್ರಾಂತಿ, ಮಾತುಕತೆ ಮತ್ತು ವಂದನಾರ್ಪಣೆ. ಬೆಂಗಳೂರನ್ನು ರಾತ್ರಿ ಸುಮಾರು 10.00 ಗಂಟೆಗೆ ಸುಖವಾಗಿ ತಲುಪಿದೆವು. ಅಲ್ಲಿಂದ ನಮ್ಮ ಮನೆಗಳಿಗೆ ವಾಪಸ್. ಏನೇ ಹೇಳಿ, ಎಲ್ಲರೂ ಸಂತೋಷವಾಗಿ ಬ0ಧುಮಿತ್ರರ ಜೊತೆ ಒಂದು ದಿನ ಕಾಲ ಕಳೆದರು. ನಿಜಕ್ಕೂ ಎಲ್ಲರಿಗೂ ಮರೆಯಲಾಗದ ಸುದಿನ.

ಈ ಪ್ರಯಾಣದಲ್ಲಿ ಭಾಗವಹಿಸಿದ ಬಂಧು ಬಳಗದವರಿಂದ ಸಂಘದ ಎಲ್ಲ ಕಾರ್ಯಕರ್ತರಿಗೂ ಪ್ರೀತಿಯ ನಮನಗಳು ಮತ್ತು ವಂದನೆಗಳು.

*ಜೈ ಬೃಹಚ್ಚರಣ ಸಂಘ*



■ ಶ್ರೀನಿವಾಸಮೂರ್ತಿ



# ಮಂಕುತಿಮ್ಮನ ಕಗ್ಗದ ತಾತ್ಪರ್ಯ

■ ಶ್ರೀಮತಿ ಜೆ.ಪಿ. ಲಕ್ಷ್ಮೀದೇವಿ

ಜೀವ ಜಡರೂಪ ಪ್ರಪಂಚವನಾವುದೋ
ಆವರಿಸಿಕೊಂಡು ಮೊಳ ನೆರೆದು ಮಿಹುದಂತೆ
ಭಾವಕೊಳಪಡದಂತೆ ಅಳತೆಗಳವಡದಂತೆ
ಆವಿಶೇಷಕೆ ಮಣಿಯೋ..... ಮಂಕುತಿಮ್ಮ !!

ಭಗವಂತ ಪ್ರಪಂಚವನ್ನು ಸೃಷ್ಟಿಸಿದ. ಸೃಷ್ಟಿಯಲ್ಲೇ ಅನೇಕ ಜೀವಿಗಳನ್ನೂ ಸೃಷ್ಟಿಸಿ ಜಡರೂಪವಾದ ಬೆಟ್ಟಗುಡ್ಡ ಮುಂತಾದವುಗಳನ್ನು ಸೃಷ್ಟಿ ಮಾಡಿದ್ದಾನೆ. ಈ ಪ್ರಪಂಚವೆಲ್ಲವೂ ಭಗವಂತನಿಂದ ಬೇರೆಯಲ್ಲ. "ಪುರುಷಂ ಏವೇದಂ ಸರ್ವಂ" ಬ್ರಹ್ಮ ವಿಶ್ವವನ್ನು ಸೃಷ್ಟಿಮಾಡಿ ಅದನ್ನೇ ಪ್ರವೇಶ ಮಾಡಿದ ಎಂದು ಉಪನಿಷತ್ತು ಹೇಳಿದೆ. ಪ್ರತಿಯೊಂದು ವಸ್ತುವಿನಲ್ಲೂ ಆತ್ಮರೂಪದಿಂದ ಇರುವುದರಿಂದ – ಪ್ರತಿಯೊಂದು ವಸ್ತುವೂ ಚೇತನದಿಂದ, ಜ್ಯೋತಿಯಿಂದ ಕೂಡಿದೆ. "ಅಂತರ್ ಬಹಿಶ್ಚ ಸತ್ಸರ್ವಂ ವ್ಯಾಪ್ತೋ ನಾರಾಯಣ ಸ್ಥಿತಃ" ಇಡೀ ಜಗತ್ತಿನಲ್ಲಿ ನಾವೇನು ನೋಡುತ್ತೀವೋ, ಕೇಳುತ್ತೇವೋ, ಎಲ್ಲದರಲ್ಲೂ ಭಗವಂತನಿದ್ದಾನೆ. ಅದರಲ್ಲಿ ಆವರಿಸಿಕೊಂಡಿದ್ದಾನೆ. ಇಷ್ಟೆಲ್ಲಾ ಇದ್ದರೂ ಊಹಾತೀತ–ಮಾಯಾತೀತ–ಕಲ್ಪನಾತೀತ–ಭಾವಾತೀತ. ಮನಸ್ಸಿನ ಭಾವನೆಗೂ ಮೀರಿದವನು ಎಂದು ಹೇಳಬಹುದು. 'ಅಪ್ರಾಪ್ಯ ಮನಸಾ ಸಹಾ' ಎಂದು ವೇದಗಳು ಹೇಳುತ್ತವೆ. 'ಅಳತೆಗಳವಡದಂತೆ' ಅಪ್ರಮೇಯ, ಪ್ರಮೇಯ ಅಂದರೆ ಅಳೆಯುವುದು. ಅವನನ್ನು ಅಳೆಯಲಾಗದ್ದರಿಂದ ಅಪ್ರಮೇಯ "ಅಣೋರಣೀಯನ್ ಮಹತೋ ಮಹಿಮಾನ್" ಎಂದಿದ್ದಾರೆ ದಾಸರು. ಅವನನ್ನು ಅಳೆಯುವ ಯಾವ ಮಾಪಕವೂ ಇಲ್ಲ. ಇಂಥ ಮಹಿಮೆಗಳನ್ನೊಳಗೊಂಡ ಆ ವಿಶೇಷವಾದ ಮಹಿಮೆಯಿಂದ ಕೂಡಿರುವ ಉಪಮಾತೀತವಾದ ಒಂದು ದಿವ್ಯಶಕ್ತಿಗೆ ನಮಸ್ಕಾರ ಮಾಡು ಎಂದಿದ್ದಾರೆ ಡಿ.ವಿ. ಗುಂಡಪ್ಪನವರು.

ಈ ದಿನ ಸಸಿಯಾಗಿರುವುದು ಮಾರನೇ ದಿನವೇ ಎಲೆಗಳಾಗಿ ಹರಡಿ ಹೂವು ಹಣ್ಣುಗಳಾಗಿ ಮಾರ್ಪಾಟು ಮಾಡುವ ಒಂದು ವಿಶೇಷ ಶಕ್ತಿ. ಈ ಅದ್ಭುತ ಮಹಿಮೆಗೆ ತಲೆಬಾಗಲೇಬೇಕು.

## ಮುಂದಿನ "ಬೃಹಚ್ಚರಣ" ಸಂಚಿಕೆಗೆ.....

2014ರ ಅಕ್ಟೋಬರ್, ನವೆಂಬರ್, ಡಿಸೆಂಬರ್ ಮಾಹೆಯ ಬೃಹಚ್ಚರಣ ಸಂಚಿಕೆಗೆ ಲೇಖನಗಳನ್ನು ಕಳುಹಿಸುವವರು ಸಂಘದ ಅಧ್ಯಕ್ಷರಿಗಾಗಲಿ, ಕಾರ್ಯದರ್ಶಿಗಳಿಗಾಗಲಿ ಅಥವಾ ಸಂಪಾದಕರಿಗಾಗಲಿ ಡಿಸೆಂಬರ್ 15ರ ಒಳಗೆ ತಲುಪುವಂತೆ ಕಳುಹಿಸತಕ್ಕದ್ದು.

**ಸಂಪಾದಕ**
**"ಬೃಹಚ್ಚರಣ"**


# 1153, 3ನೇ ಮುಖ್ಯರಸ್ತೆ, ಗಿರಿನಗರ 2ನೇ ಹಂತ, ಬೆಂಗಳೂರು–85

# ಶಿಕ್ಷಕರ ದಿನಾಚರಣೆ ವಿಶೇಷ ಲೇಖನ

ಬೃಹಚ್ಚರಣ ಸಮುದಾಯದವರು, ಸರಳ–ಸಜ್ಜನರಾಗಿರುವುದಕ್ಕೆ ಅವರು ತಮ್ಮ ಮಠ–ಗುರು ಪರಂಪರೆ ಬಗ್ಗೆ ಇಟ್ಟಿರುವ ಭಕ್ತಿ. ಶಿಕ್ಷಕರ ಬಗ್ಗೆ ಇಟ್ಟಿರುವ ವಿಶ್ವಾಸ–ನಂಬಿಕೆ, ಇವೇ ಕಾರಣ.

ನಮ್ಮ ಸಮುದಾಯದವರಲ್ಲಿ ಹೆಚ್ಚಿನವರು, ತಮ್ಮ ವೃತ್ತಿಯನ್ನು ಶಾಲಾ–ಕಾಲೇಜುಗಳಲ್ಲಿ ಶಿಕ್ಷಕರಾಗಿ ಆರಿಸಿಕೊಂಡಿರುವುದು ಅವರ ಸೇವಾ ಮನೋಭಾವ ಸೂಚಿಸುತ್ತದೆ. ಉಪಾಧ್ಯಾಯರಾಗಿ ಕೆಲಸ ನಿರ್ವಹಿಸಿರುವ ನಮ್ಮವರು ನಿರ್ವಂಚನೆಯಿಂದ ಪಾಠ ಕಲಿಸಿ, ಉತ್ತಮ ಮಾರ್ಗದರ್ಶಕರು ಎಂದು ಹೆಸರು ಗಳಿಸಿರುವುದಲ್ಲದೆ ಮಠ ಮಾನ್ಯ, ಸಾರ್ವಜನಿಕರಿಂದ, ರಾಜ್ಯ ಕೇಂದ್ರ ಸರ್ಕಾರದಿಂದ "ಉತ್ತಮ ಶಿಕ್ಷಕ"ರೆಂದು ಮನ್ನಣೆ ಪಡೆದಿರುವುದು ನಮಗೆ ಹೆಮ್ಮೆ.

ಭಾರತದ ರಾಷ್ಟ್ರಪತಿಗಳಿಂದ "ಉತ್ತಮ ಶಿಕ್ಷಕ" ರಾಷ್ಟ್ರೀಯ ಪುರಸ್ಕೃತ ಪಡೆದ ನಮ್ಮ ಸಮುದಾಯದ ಹಿರಿಯ ಉಪಾಧ್ಯಾಯರುಗಳಾದ ಶ್ರೀಯುತರಾದ ಜಗದೀಶ್ ಹಾಗೂ ರಾಜಗೋಪಾಲ್‌ರವರನ್ನು ಈ ಸಮಯದಲ್ಲಿ ನೆನೆಸುವುದು ಸಮಂಜಸ. ಈ ಮಹನೀಯರು ಇಬ್ಬರೂ ತಮ್ಮ ವೃತ್ತಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೇಗೂರಿನಲ್ಲಿ ಪ್ರಾರಂಭಿಸಿರುವುದು ವೈಶಿಷ್ಟ್ಯ.



ಅಟ್ಟೂರು ವೆಂಕಟಾಚಲಪತಿರವರ ಪುತ್ರ ಶ್ರೀ ಜಗದೀಶ ಜಯನಗರದ community centre ಶಾಲೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ್ದು, 1992ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಬಂಗಾರಪ್ಪ ನವರಿಂದ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ" ಯನ್ನೂ, 1994ರಲ್ಲಿ ಭಾರತದ ರಾಷ್ಟ್ರಪತಿ ಶ್ರೀ ಶಂಕರದಯಾಳ ಶರ್ಮರವರಿಂದ "ರಾಷ್ಟ್ರೀಯ ಶಿಕ್ಷಕ" ಪ್ರಶಸ್ತಿಯನ್ನೂ ಪಡೆದಿರುತ್ತಾರೆ. 1997ರಲ್ಲಿ ಸೇವೆಯಿಂದ ನಿವೃತ್ತರಾದರೂ ಕೋರಿಕೆ ಮೇಲೆ ವಿಜಯ ಕಾಲೇಜಿನ ಪ್ರಾಂಶುಪಾಲರಾಗಿ ಕೆಲಸ ನಿರ್ವಹಿಸಿರುವುದು ಅವರ ಕರ್ತವ್ಯ ನಿಷ್ಠೆಯ ದ್ಯೋತಕ ಅವರ ಪತ್ನಿ ಹಾಗೂ ಸೋದರಿ ಕೂಡ ಉಪನ್ಯಾಸಕರಾಗಿರುವುದೊಂದು ವಿಶೇಷ. ವಿದ್ಯಾಕ್ಷೇತ್ರದಲ್ಲಿನ ಅನುಭವಕ್ಕೆ 32ಕ್ಕೂ ಹೆಚ್ಚಿನ ಪುಸ್ತಕಗಳನ್ನು ವಿದ್ಯಾರ್ಥಿಗಳಿಗಾಗಿ ಪ್ರಕಟಿಸಿರುವುದು ಸಾಕ್ಷಿ.



ರಾಜಾಪುರ ಶ್ರೀನಿವಾಸಮೂರ್ತಿರವರ ಪುತ್ರ ರಾಜಗೋಪಾಲ್ ಬಸವನಗುಡಿಯ ಆಚಾರ್ಯ ಪಾಠಶಾಲೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ್ದು, 1995ರಲ್ಲಿ ಬೆಂಗಳೂರು ಜಿಲ್ಲೆಯಿಂದ "ಉತ್ತಮ ಶಿಕ್ಷಕ" ಪ್ರಶಸ್ತಿಯನ್ನೂ, 1996ರಲ್ಲಿ ರಾಷ್ಟ್ರಪತಿ ಶ್ರೀ ಕೆ.ಆರ್. ನಾರಾಯಣ್‌ರವರಿಂದ "ರಾಷ್ಟ್ರೀಯ ಶಿಕ್ಷಕ" ಪ್ರಶಸ್ತಿಯನ್ನು ಪಡೆದಿರುತ್ತಾರೆ. ನಿವೃತ್ತರಾದ ಮೇಲೂ ವಿವಿಧ ಶಾಲಾ ಕಾಲೇಜುಗಳ ಕೋರಿಕೆ ಮೇಲೆ ಪಾಠ ಕಲಿಸಿಕೊಡುತ್ತಿದ್ದಾರೆ. ಗಣಿತಶಾಸ್ತ್ರದ ಬಗ್ಗೆ 18 ಪುಸ್ತಕಗಳನ್ನು ಹಾಗೂ ಸಾಹಿತ್ಯದ ಬಗ್ಗೆ 8 ಪುಸ್ತಕಗಳನ್ನು ಪ್ರಕಟಿಸಿದ್ದು ಸಾಮಾಜಿಕ ಕಳಕಳಿಯ ಬಗ್ಗೆ ಮೂರು ಪುಸ್ತಕಗಳು ಅಚ್ಚಾಗ ಬೇಕಿದೆ. ಈ ರಾಷ್ಟ್ರೀಯ ಪುರಸ್ಕೃತ ಶಿಕ್ಷಕರೊಂದಿಗೆ ನಮ್ಮ ಸಮುದಾಯದ ಪ್ರತಿಯೊಬ್ಬ ಶಿಕ್ಷಕರಿಗೂ ಪ್ರಣಾಮಗಳು.

–ಸಂ.

# ದುಃಖದ ಮೂಲ ಅಹಂಕಾರ

ಒಂದೂರಿನಲ್ಲಿ ಒಬ್ಬ ಶ್ರೀಮಂತನಿದ್ದ. ಅಪಾರ ಧನ ಸಂಗ್ರಹ ಮಾಡಿ, ಬಹಳ ಕಾಲ ಸಿರಿಯಲ್ಲಿ ಬದುಕಿದ ನಂತರವೂ ಪಾರಮಾರ್ಥಿಕ ಫಲ ಇಲ್ಲದಿದ್ದರೆ ಈ ಸಿರಿ ವ್ಯರ್ಥ ಎಂದು ಗೊತ್ತಾಯಿತು. ಮೋಕ್ಷವೆಂಬ ಸಿರಿಯನ್ನು ಪಡೆಯಬೇಕು ಎನಿಸಿತು. ಇದೇ ಭಾವದಲ್ಲಿ ಅಶಾಂತಿಯಲ್ಲಿ ಬೆಂದು ಕಡೆಗೊಂದು ದಿನ ಸಂತರೊಬ್ಬರಲ್ಲಿಗೆ ಹೋಗಿ ತನ್ನನ್ನು ಈ ಅಶಾಂತಿಯಿಂದ ಬಿಡುಗಡೆಗೊಳಿಸಬೇಕು ಎಂದು ಬೇಡಿಕೊಂಡ.

ಸಂತನೆಂದ "ನಿನ್ನ ಅಶಾಂತಿಗೆ ಕಾರಣ ಯಾವುದೋ ಅದನ್ನು ತ್ಯಜಿಸಿ ಬಾ. ಆಗ ನಾನು ಮುಂದುವರೆಯುವ ಹಾದಿ ತೋರಿಸುತ್ತೇನೆ." "ಸರಿ" ಎಂದು ತನ್ನ ಸಂಪತ್ತನ್ನು ದಾನ ಮಾಡಿ ಕಡೆಗೆ ನಿರ್ಗತಿಕವಾಗಿ ತೊಟ್ಟ ಬಟ್ಟೆಯಲ್ಲಿ ಸಂತನಲ್ಲಿಗೆ ಬಂದ. ಈಗ "ತೋರಿಸಿ ಮುಕ್ತಿಯ ಹಾದಿ" ಎಂದ. ಏಕೆಂದರೆ ಸಂತನನ್ನು ಶ್ರೀಮಂತ ಗುರುವಾಗಿ ಸ್ವೀಕರಿಸಿದ.

ಆಗ ಸಂತರು ಶ್ರೀಮಂತ ತೊಟ್ಟಿರುವ ಬೆಲೆಬಾಳುವ ವಸ್ತ್ರಗಳನ್ನೂ ತ್ಯಜಿಸಲು ಹೇಳಿದರು. ಆಗ ಮರುಮಾತನಾಡದೆ ಸಂತರು ಹೇಳಿದಂತೆಯೇ ನಡೆದುಕೊಂಡನು. ಅವನನ್ನು ಹೊರಗೆ ನೂಕಿ ಬಾಗಿಲು ಹಾಕಿದರು. ಸಿರಿವಂತನಿಗೆ ಆಗ ಅಸಾಧ್ಯ ನಿರಾಸೆಯಾಯಿತು. ಅಪಾರ ಧನರಾಶಿಯನ್ನು ತ್ಯಜಿಸಿ ಬಂದವನಿಗೆ ಇದು ಎಂಥಾ ಸ್ವಾಗತ! ತ್ಯಾಗದ ಬಲದಿಂದ ಸಾಧಿಸಲು ಸಾಧ್ಯ ಎಂದುಕೊಂಡಿದ್ದ. ಆದರೆ ಆ ತ್ಯಾಗ ವ್ಯರ್ಥವಾಗಿತ್ತು.

ಅಂದು ರಾತ್ರಿ ಆಗಸವೇ ಸೂರಾಗಿ ಮರದ ಬುಡದಲ್ಲಿ ಮಲಗಿದ. ನಿದ್ದೆ ಹತ್ತಿರ ಸುಳಿಯಲಿಲ್ಲ. ತಾನು ಸಕಲವನ್ನೂ ತ್ಯಜಿಸುವ ನಿರ್ಧಾರ ಮಾಡಿದ್ದರಿಂದ ಮಿತ್ರ, ಬಂಧು ಬಾಂಧವರೆಲ್ಲಾ ದೂರವಾಗಿದ್ದರು. ತನ್ನವರೆನ್ನುವವರೇ ತನ್ನ ಸಿರಿಯ ಸಂಬಂಧಿಕರು ಎಂಬ ಸತ್ಯ ಅರಿವಾಗಿತ್ತು. ಒಂದು ವಿಧದ ವೈರಾಗ್ಯ ಆವರಿಸಿತ್ತು. ಆದರೆ ಗುರುವಾದರೊ, ತನ್ನವನು, ತನ್ನನ್ನು ಉದ್ಧರಿಸುವವನು ಎಂಬ ಆಸೆ ಇತ್ತು. ಇದರ ಹಿನ್ನೆಲೆ ತನ್ನ ತ್ಯಾಗ ಎಂಬ ಗರ್ವ ಇತ್ತು. ಈಗ ಗುರುವೂ ಕೈ ಬಿಟ್ಟಿದ್ದಾನೆ.

ಅವನ ಮನಸ್ಸು ಗಾಢ ಚಿಂತೆಗೆ ಇಳಿಯಿತು. ದೇಹ ಈಗಾಗಲೇ ಕ್ಷೀಣಿಸುತ್ತಿದೆ. ವೃದ್ಧಾಪ್ಯ ಆವರಿಸಿ, ಅದಾಗಲೇ ಒಂದೊಂದೇ 'ನಾನಿಲ್ಲಿದ್ದೇನೆ' ಎನ್ನುತ್ತಿದೆ. ಇನ್ನು ಸ್ವಲ್ಪ ಕಾಲದಲ್ಲೇ ಅಥವಾ ಈ ಕ್ಷಣದಲ್ಲೇ ಸಾವು ಬರುತ್ತದೆ. ಇಷ್ಟು ಪ್ರೇಮದಿಂದ ಪೋಷಿಸಿದ ದೇಹವೂ ಹೋಗುತ್ತದೆ. ಅಂದರೆ ಅದು ನನ್ನದಲ್ಲ. ಹಾಗೆಂದರೆ ನಾನು ಯಾರು? ನನ್ನದ್ಯಾವುದು? ಅವನೆಂದರೇನು? ಅವನ ಸೇರುವ ಪರಿ ಎಂತು? ಹೀಗೆ ಚಿಂತಿಸುತ್ತಾ ಮನಸ್ಸು ವಿಚಿತ್ರ ಶಾಂತಿ ಪಡೆಯಿತು. ಈ ಶಾಂತಿಯಲ್ಲಿ ಅವನು ಇರಲಿಲ್ಲ. ಈ ಶಾಂತಿಯ ಸುಖದಲ್ಲಿ ಅವನು ಮತ್ತನಾಗಿರುವಾಗಲೇ ಬೆಳಕು ಹರಿಯಿತು.


ಎದುರಿಗೆ ಗುರು ನಿಂತಿದ್ದ. ಶಿಷ್ಯನನ್ನು ಎದೆಗಪ್ಪಿಕೊಂಡು "ಕಂದಾ, ಸಿರಿ, ಪ್ರಿಯರು, ಬಂಧುಗಳು ಇತ್ಯಾದಿ ಎಲ್ಲವನ್ನೂ ತ್ಯಜಿಸುವುದು ಸುಲಭ. ಆದರೆ, ಅಹಂಕಾರವನ್ನು ತ್ಯಜಿಸುವುದು ಬಹುಕಷ್ಟ. ಅದು ದೂರಾದರೆ, ಮುಕ್ತಿ ಸುಲಭ. ದುಃಖಕ್ಕೆ ಮೂಲ ಅಹಂಕಾರ. ಅದರ ತ್ಯಾಗವೇ ಮುಕ್ತಿಮೂಲ. ಪರಮಾತ್ಮನನ್ನು ಸೇರುವ ಹಾದಿ ಇದು" ಎಂದ. ಇದೇ ಅಂತಿಮಗುರಿ ಇಲ್ಲಿ ಪೂಜ್ಯ ಡಿ.ವಿ.ಜಿ.ಯವರ ಕಗ್ಗ ಪ್ರಸ್ತುತ.

*'ಬೇಕು ಜೀವನ ಯೋಗಕೊಂದು ಬಹು ಸೂಕ್ಷ್ಮ ನಯ!*
*ಬೇಕೊಂದು ಜಾಗರೂಕತೆ ಬುದ್ಧಿ ಸಮತೆ*
*ತಾಕವೆಂದನು ಯೋಗಿ, ನೂಕವೆಂದನು ಜಗದಿ*
*ಏಕಾಂತಿ ಸಹಮಸಿ* —*ಮಂಕುತಿಮ್ಮ*

ಲೋಕದ ಅಂತ್ಯ ಇಲ್ಲ, ಹಾಗೆ ತಿರಸ್ಕಾರವೂ ಇಲ್ಲ. ಇಂತಹ ಸಮಚಿತ್ತವೇ ಜೀವನ ಯೋಗ. ಜಗದ ಬದುಕಿನ ಒಂದು ಭಾಗ ವಾಗಿರುತ್ತಲೂ ಅವನಂತರಂಗದಲ್ಲಿ ಅವನು ಶಾಂತಿಯ, ಸುಖದ ಏಕಾಂತ ವಾಸಿ. ಇದೇ ಬದುಕಿನ ಸೂಕ್ಷ್ಮತೆ.




■ ಎಸ್. ಶ್ರೀನಿವಾಸಯ್ಯ
ಕಿತ್ತಿಗಾನಹಳ್ಳಿ




## ಪುಸ್ತಕ ಹಿರಿಮೆ

- ಪುಸ್ತಕ ಪ್ರೇಮಿಯಲ್ಲದವನು, ಶ್ರೀಮಂತ ನಾದರೂ ಬಡವನೇ.
- ಪುಸ್ತಕವನ್ನು ಪ್ರೀತಿಸುವವನಿಗೆ ಸ್ನೇಹಿತರ ಅಗತ್ಯವಿಲ್ಲ.
- ಅತ್ಯುತ್ತಮ ಪುಸ್ತಕಗಳು, ನಾಡಿನ ಸಂಸ್ಕೃತಿಯ ಪ್ರತೀಕ.
- ಮನೆ ತುಂಬಾ ಪುಸ್ತಕವಿದ್ದರೆ, ಒಂದು ಉತ್ತಮ ಹೂತೋಟವಿದ್ದಂತೆ.
- ಪುಸ್ತಕಗಳು ನಮ್ಮ ಮುಂದಿನ ಪೀಳಿಗೆಗೆ ದಾರಿದೀಪ.
- ಪುಸ್ತಕಗಳಿಗಾಗಿ ವಿನಿಯೋಗಿಸುವ ಹಣ ವ್ಯರ್ಥವಾಗುವುದಿಲ್ಲ.
- ತಿಳಿಯೋದು ಪುಸ್ತಕ ಜ್ಞಾನ, ಅನುಭವವೇ ನಿನಗೆ ದಾರಿ ದೀಪ (ಧರ್ಮ)
- ಸೃಷ್ಟಿಯ ಸಂದೇಶವನ್ನು, ಪುಸ್ತಕಗಳು ಮೌನದಿಂದ ಸಾರುತ್ತಿದೆ.
- ವಿಶ್ವವೆಂಬ ಪುಸ್ತಕದಲಿ, ಮನುಷ್ಯ ಜೀವಂತ ಪುಟ.
- ಶ್ರೇಷ್ಠ ಗ್ರಂಥಗಳನ್ನು ಓದುವುದರಿಂದ, ಉತ್ತಮ ಅಭಿಪ್ರಾಯ ಬರುತ್ತವೆ.
- ಪುಸ್ತಕವೆಂಬುದು ಮಾನವನ ಪೀಳಿಗೆಗೆ ಕೊಡುವ ಕಾಣಿಕೆ ಮತ್ತು ಆಸ್ತಿ.
- ಪುಸ್ತಕ ಓದುವ ಹವ್ಯಾಸವುಳ್ಳವನು, ಎಲ್ಲಿ ಹೋದರೂ ಸಂತೋಷವಾಗಿರಬಲ್ಲ.
- ನಮ್ಮ ಬದುಕನ್ನು ಹೊಸದುಗೊಳಿಸಿ, ಸಾಮಾಜಿಕ, ನೈತಿಕ ಆರೋಗ್ಯ ಕಾಪಾಡುವ ಬಲವಾದ ಆಯುಧವೇ ಪುಸ್ತಕ.
- ಒಳ್ಳೆಯ ಪುಸ್ತಕ ನಕಾಶೆಯಿದ್ದಂತೆ ಅದು ಒಳ್ಳೆಯದನ್ನು ತೋರಿಸುತ್ತದೆ. ಆದರೆ ಆ ಸ್ಥಳ ತಲುಪುವುದು ನಿನ್ನ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.
- "ಮೆದುಳು" ಉದರವಿದ್ದಂತೆ, ಅದರೊಳಗೆ ಎಷ್ಟು ತುಂಬುತ್ತೀರೆಂಬುದು ಮುಖ್ಯವಲ್ಲ. ಎಷ್ಟು ಜೀರ್ಣಿಸಿಕೊಳ್ಳುತ್ತಿರೆಂಬುದು ಮುಖ್ಯ.
- ಉತ್ತಮ ಪುಸ್ತಕ, ಉತ್ತಮ ಸ್ನೇಹಿತ
- ಸೋಮಾರಿಯಾಗಿ ಕಾಲ ಕಳೆಯಬೇಡ, ಕೆಲಸವಿಲ್ಲದ ವೇಳೆ ಪುಸ್ತಕಗಳನ್ನು ಓದು.
- ಒಳ್ಳೆಯ ಪುಸ್ತಕ (ಗ್ರಂಥ) ಓದುವುದರಿಂದ ಮನಸ್ಸು ಹಿಡಿತದಲ್ಲಿ ಇರುತ್ತದೆ.
- ಪುಸ್ತಕಗಳನ್ನು ಓದುವುದರಿಂದ, ಜಗತ್ತನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ನೋಡಬಹುದು.
- ಪುಸ್ತಕಗಳು ದಾರಿ ತೋರಿಸುವ ದೀಪಗಳಿದ್ದಂತೆ.
- ಮನೆಯಲ್ಲಿ ಪುಸ್ತಕಗಳಿದ್ದರೆ ಸಾಲದು ಅದನ್ನು ಓದುವ ಹವ್ಯಾಸ ಬೇಕು.



■ ಛಾಯಾ ಭಗವಾನ್

## ನೆನಪಿನಾಳದಿಂದ ಛಾಯಾಚಿತ್ರ - 15 ಮತ್ತು 16



ಎಸ್. ರಾಮಯ್ಯನವರ ಅವಿಭಕ್ತ ಕುಟುಂಬ – 1973 (ಮಗಳ ಮದುವೆ ಸಂದರ್ಭ)



ಬೂದುಗೆರೆ ಸುಬ್ಬರಾವ್ ಅವರ ಅವಿಭಕ್ತ ಕುಟುಂಬ – 1973 (ಮಗಳ ಮದುವೆ ಸಂದರ್ಭ)


## ನೆನಪಿನಾಳದಿಂದ ಛಾಯಾಚಿತ್ರ - 17 ಮತ್ತು 18



ಗುಂಜೂರು ಗಂಗಾಧರನ್ ಕುಟುಂಬ – 1978
(ಮಗಳು ಸೌ॥ ಮಾಲಿನಿಯವರ ಮದುವೆಯ ಸಂದರ್ಭ)



ಹಿಮಡಳ್ಳಿ ನಾಗಮ್ಮ ಗೋಪಾಲಯ್ಯ ಕುಟುಂಬ – 1976
(ಎಡದಿಂದ ಮದ್ಯ ಸಾಲಿನಲ್ಲಿ ಕುಳಿತಿರುವ 7ನೆಯವರು ಡಿವಿಜಿ 2ನೇ ಪುತ್ರಿ ಶ್ರೀಮತಿ ಇಂದಿರಮ್ಮ)



## ಶೃಂಗೇರಿ ಗುರು ಪರಂಪರಾ ಸ್ತೋತ್ರ

ಆದಿ ಗುರು ಶಂಕರರಿಗೆ ನಮೋ ನಮೋ ।
ಜಗದ್ಗುರು ಶಂಕರರಿಗೆ ನಮೋ ನಮೋ ॥ಪ॥

ಪರಾಶರಾ ಗುರು ಸಚ್ಚಿದಾನಂದರಿಗೆ ।
ವ್ಯಾಸ ಶುಕ ಗೌಡ ಪಾದರಿಗೆ ನಮೋ ನಮೋ ॥1॥

ಶ್ರೀ ಪದ್ಮ-ಪಾದರಿಗೆ ಹಸ್ತಾ ಮಲಕರಿಗೆ ।
ತೋಟಕಾಚಾರ್ಯರಿಗೆ ನಮೋ ನಮೋ ॥2॥

ಸುರೇಶ್ವರಾಚಾರ್ಯ ನೃಸಿಂಹಭಾರತಿಗೆ ।
ಶ್ರೀ ವಿದ್ಯಾರಣ್ಯರಿಗೆ ನಮೋ ನಮೋ ॥3॥

ನಾರಾಯಣಾಚಾರ್ಯ । ಅಸ್ಮದಾಚಾರ್ಯರಿಗೆ ।
ಗುರುಪಾದ ಸರೋರುಹಕೆ ನಮೋ ನಮೋ ॥4॥

ಚಂದ್ರಶೇಖರ ಭಾರತಿಗೆ । ಅಭಿನವ ಸರಸ್ವತಿಗೆ ।
ಭಾರತೀ ತೀರ್ಥರಿಗೆ ನಮೋ ನಮೋ ॥5॥

ಆನಂದ ಶಿವಾನಂದ ಸೌಂದರ್ಯ ಲಹರಿಗಳ ।
ರಚಿಸಿದ ಭಗವತ್ಪಾದಗೆ ನಮೋ ನಮೋ ॥6॥



■ ಗಾಯತ್ರಿ ಶೇಷಾಚಲ
25630483

## ಉಂಗುರ ವಿನಿಮಯ

ಮಸುಂದರರನ ಕಂಡು ಮಾರು ಹೋದಳು ರಾಧೆ
ಧಾರೆ ಧಾರೆಯಾಗಿ ಹರಿಯಿತು ಆನಂದ ಪನ್ನೀರು
ಸಿಂಗಪುರದ ಸಿರಿಯ ಕಾಂತನನು ಕಂಡ ರಾಧೆಗೆ
ಆಯಿತು ನಿತ್ಯಾನಂದದ ಮಹಾದಾನಂದ
ಉದ್ಯಾನನಗರ ಬೃಂದಾವನದ ಸುಂದರಲೋಕದಲಿ
ಕಾದು ಕುಳಿತಿರುವ ರಾಧೆಯ ಮನಸಿನಾಳದಲಿ
ಬೀಸಿತು ಬೇಸಿಗೆಯ ಬೆಸುಗೆಯ ಚುಂಬಕಗಾಳಿ
ಹೆಣ್ಣಿಗೊಂದು ಗಂಡು ಸೇರಿ ಹೊಂದಿಕೊಂಡು ಮುಂದಿನ
ಬಾಳಿನ ಪಥವು ಸಮರಸದ ಭಾವವಾಗಿ ಸುರಸುಂದರ
ಭಾವದ ಗೀತೆಯು ಹಿರಿಯರ ಹರಕೆಯಿಂ ನೇಹಿಗರ
ಲಾಲಿತ್ಯ ಚೇಡಿಕೆಯಲಿ ಶಾಮಸುಂದರನಲ್ಲಿರುವ
ವನಮಾಲಿನ ಕೊಳಲಿನಿಂಚರದಿಂ ಈ ಜಗವು
ಸಂತಸಮಯವೆನಿಸಿ ಆನಂದದ ಸಂಮಿಲನಕ್ಕೆ
ಕರುಣಾಳು ಶ್ರೀನಿವಾಸನ ಶ್ರೀರಕ್ಷೆಯಿರಲಿ.



■ ಜೆ.ಎಸ್ ಸತ್ಯಮೂರ್ತಿ
9844469581

**ನಮ್ಮವರು**

## ಆನೇಕಲ್ ಪ್ರಾಂತ್ಯದ ಪ್ರಥಮ LMP ವೈದ್ಯ



ಬೃಹಚ್ಚರಣ ಸಮುದಾಯದ ಡಾ॥ ಸುಬ್ಬರಾಮಯ್ಯ ನವರು ಈಗಿನ ತಮಿಳುನಾಡು ಪ್ರಾಂತ್ಯದ ಅಂಚಿನಲ್ಲಿರುವ ಹೊಸೂರಿನವರು. 1900ರ ಮಾರ್ಚ್ ಮಾಹೆಯಲ್ಲಿ ಜನನ. ಇವರ ತಂದೆ ಅನಂತಯ್ಯನವರು ಹೊಸೂರು ಖಜಾನೆಯಲ್ಲಿ ಲೆಕ್ಕ ಬರಹಗಾರರು, ತಾತ ಹೊಸೂರು ನಾಗೇಂದ್ರ ರಾಯರು.

ಅಂದಿನ ಇಂಟರ್ ತೇರ್ಗಡೆಯಾದ ನಂತರ ಬೆಂಗಳೂರು ಮೆಡಿಕಲ್ ಸ್ಕೂಲ್‌ಲ್ಲಿ LMP ಪದವಿ ಪಡೆದು, ಸರ್ಕಾರದಲ್ಲಿ ಜನಾನುರಾಗಿ ವೈದ್ಯರಾಗಿದ್ದರು. ಹಿಂದಿನ ಮೈಸೂರು ರಾಜ್ಯದ ವೈದ್ಯಕೀಯ ಇಲಾಖೆಯಲ್ಲಿ ಸಹಾಯಕ ಸರ್ಜನರಾಗಿ 1955ರಲ್ಲಿ ನಿವೃತ್ತಿ ಹೊಂದಿದರು. ನಿವೃತ್ತಿ ನಂತರ ಮರಸೂರು, ಮಡಿವಾಳ, ಬಿನ್ನಮಂಗಲ ಭಾಗಗಳಲ್ಲಿ ವ್ಯವಸಾಯ ವೃತ್ತಿಯನ್ನು ಅಳವಡಿಸಿಕೊಂಡು ಬೆಂಗಳೂರಿನ ಫ್ರೇಜರ್‌ಟ್‌ನ್‌ನಲ್ಲಿ ವಾಸವಾಗಿದ್ದರು. ಅಪ್ಪಟ ಗಾಂಧಿವಾದಿಯಾಗಿದ್ದು, ಸದಾ ಶ್ರಮಜೀವಿ ಜೀವನ ನಡೆಸಿದರು. ವಾಣಿ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್‌ನ ಸಂಸ್ಥಾಪಕರಾಗಿದ್ದ ಶ್ರೀ ಶ್ರೀಕಂಠೇಶ್ವರ ಅಯ್ಯರ್ ಅವರ ಒಡನಾಡಿ ಯಾಗಿದ್ದರು. ದಿನಾಂಕ 5-3-1969ರಂದು ಮೈಸೂರಿನಲ್ಲಿನ ತಮ್ಮ ಮಗಳಾದ ಶ್ರೀಮತಿ ಎಸ್.ವಿ. ಶಾರದಮ್ಮ ವೆಂಕಟೇಶರವರ ನಿವಾಸದಲ್ಲಿ ಕಾಲವಾದರು. ಬೃಹಚ್ಚರಣ ಸಮುದಾಯದಲ್ಲೇ ಹೊಸೂರು, ಆನೇಕಲ್ ಪ್ರಾಂತ್ಯದ ಮೊದಲನೇ LMP ವೈದ್ಯರೆಂಬ ಹೆಗ್ಗಳಿಕೆ ಇಂದಿಗೂ ಸವಿನೆನಪು.



■ ಸೇಲಂ ವಿ. ಸುಬ್ರಮಣ್ಯಂ
09845334589

## ನಮ್ಮನ್ನಗಲಿದ ನಮ್ಮವರು

9-8-2014ರಂದು ಬಳೇಪೇಟೆ ಎಸ್. ಗೀತಾ ನಾಗರಾಜ್ (57)
7-9-2014ರಂದು ರಾಜಾಪುರದ ಶಾರದಮ್ಮ (90)
12-9-14ರಂದು ಸರ್ಜಾಪುರದ ಜಯಮ್ಮ (95)
15-9-14ರಂದು ಗುಂಜೂರು ಗೌರಮ್ಮ ಗುಂಡಪ್ಪ (70)
1-10-14ರಂದು ರಾಜಾಪುರ ಗುರುಪ್ರಸಾದ್ ಛಾಯಾಪತಿ (52)
5-10-2014ರಂದು ಸಣ್ಣೆ ಶಾಮಣ್ಣ (84)
10-10-2014ರಂದು ಗುಂಜೊರು ವೆಂಕಟೇಶನ್ (77)

## ವಾರ್ತಾ ಚಿತ್ರಗಳು







### ನಾಗೇಶ್ವರ ಕ್ಷೇತ್ರದಲ್ಲಿ ಉಪಾಕರ್ಮ

ಸಹೃದಯ ವಿಪ್ರವೃಂದವು ಭಾನುವಾರ 10–8–2014ರಂದು ಆನೇಕಲ್ಲು ತಾಲೂಕು ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದ ಶ್ರೀಲಕ್ಷ್ಮಿ ನಾರಾಯಣ ಕಲ್ಯಾಣ ಮಂಟಪದಲ್ಲಿ ಉಪಾಕರ್ಮ ಆಚರಿಸಲಾಯಿತು.

## ಸುದ್ದಿ ಮನೆ



### ಶ್ರೀನಂದ ಕಿಶೋರ್‌ಗೆ ಪಿಎಚ್.ಡಿ.

ನಮ್ಮ ಸದಸ್ಯ ಎ.ಪಿ.ಎಸ್. ಕಾಲೇಜಿನ ಉಪನ್ಯಾಸಕ ಗುಮಳಾಪುರದ ಶ್ರೀನಂದ ಕಿಶೋರ್‌ರವರು "ರಿಸ್ಕ್ ಮ್ಯಾನೇಜ್‌ಮೆಂಟ್ ಇನ್ ಸೆಲೆಕ್ಟ್ ಇಂಡಿಯನ್ ಕಂಪನೀಸ್" ಬಗ್ಗೆ ಮಂಡಿಸಿದ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾನಿಲಯವು ಪಿಎಚ್.ಡಿ. ಪದವಿ ನೀಡಿರುತ್ತದೆ. ಸಂಘವು ಡಾ॥ ನಂದಕಿಶೋರ್‌ರವರಿಗೆ ಶುಭ ಹಾರೈಸುತ್ತದೆ.

✦ ✦



ಸಂಘದ **ಶ್ರೀ ಗೋವಿಂದರಾವ್ ದೇಶಪಾಂಡೆ** ಅವರು ಕೇಂಬ್ರಿಡ್ಜ್ ಯೂನಿವರ್ಸಿಟಿ ಲಂಡನ್ ಅವರ ವತಿಯಿಂದ ನಡೆದ ವೃತ್ತಿಪರ ಶಿಕ್ಷಕರ ತರಬೇತುದಾರ ಪದವಿ ಪಡೆದದ್ದಕ್ಕೆ ಸಂಘವು ಅವರನ್ನು ಅಭಿನಂದಿಸುತ್ತದೆ.



### ಶುಭ ವಿವಾಹ

ಸಂಘದ ಸದಸ್ಯ **ಶ್ರೀ ಆರ್.ಎಸ್. ರವಿಕುಮಾರ್** ಹಾಗೂ **ಶ್ರೀಮತಿ ವಸುಮತಿ** ದಂಪತಿಗಳ ಪುತ್ರ **ಚಿ॥ ಕಾರ್ತಿಕ್**‌ರವರ ವಿವಾಹ **ಚಿ॥ ಸೌ॥ ರಶ್ಮಿ**ಯುವರೊಂದಿಗೆ ದಿನಾಂಕ: 29–9–14ರಂದು ಬೆಂಗಳೂರು ಚಾಮರಾಜಪೇಟೆಯಲ್ಲಿ ನೇರವೇರಿತು.

✦ ✦

ಸಂಘದ ಸದಸ್ಯ **ಶ್ರೀ ಎ.ವಿ. ಜಯರಾಂ** ಹಾಗೂ **ಶ್ರೀಮತಿ ವಿದ್ಯಾ** ದಂಪತಿಗಳ ಪುತ್ರ **ಚಿ॥ ಗಿರಿಧರ್**‌ರವರ ವಿವಾಹ **ಚಿ॥ ಸೌ॥ ಸಿಂಧುರಾವ್** ರವರೊಂದಿಗೆ ದಿನಾಂಕ : 29–9–14ರಂದು ಗಿರಿನಗರದ ನಂದ ಗೋಕುಲ ಕಲ್ಯಾಣ ಮಂಟಪದಲ್ಲಿ ನೆರವೇರಿತು.

**ಬೃಹಚ್ಚರಣ ಸಂಘ ನವದಂಪತಿಗಳಿಗೆ ಶುಭ ಹಾರೈಸುತ್ತದೆ.**

**ಸಂಘಕ್ಕೆ ನೂತನ ಸದಸ್ಯರು**

**ಶ್ರೀಮತಿ ಅಶ್ವಿನಿ ರಾಮಚಂದ್ರನ್**
**ಶ್ರೀ ಎ.ವಿ. ಪ್ರಕಾಶ್**

**ಸಂಘಕ್ಕೆ ನೂತನ ಪೋಷಕರು**

**ಶ್ರೀ ಎಂ.ಎಸ್. ಸತ್ಯನಾರಾಯಣ್**

ಮಾನ್ಯರೇ,
ನಮ್ಮ ಸಮುದಾಯದ ಯಾವುದೇ ಕುಟುಂಬದ ಸದಸ್ಯರು **"ರಾಜ್ಯ"** ಅಥವಾ **"ರಾಷ್ಟ್ರೀಯ"** ಮನ್ನಣೆ ಪಡೆದಿದ್ದರೆ ಅದರ ವಿವರಗಳನ್ನು ನಮಗೆ ಪ್ರಕಟಣೆಗಾಗಿ ಕಳುಹಿಸಲು ಕೋರಿಕೆ.

*–ಸಂ.*




## ಕೆಮ್ಮಿಗೆ ಮದ್ದು

1. ಕೆಮ್ಮು ಬಹಳ ಇರುವಾಗ ರಾತ್ರಿ ಮಲಗುವ ಮೊದಲು ಎರಡು ಕಾಳು ಮೆಣಸು, ಎರಡು ಕಾಳು ಉಪ್ಪು ಸೇರಿಸಿ ವೀಳೆದೆಲೆಯಲ್ಲಿ ಇಟ್ಟು ಮಡಿಸಿ, ಒಂದು ಸಲ ಅಗಿದು ದವಡೆಯಲ್ಲಿಟ್ಟುಕೊಂಡು ಅದರ ರಸ ನುಂಗುತ್ತಿದ್ದರೆ, ಕೆಮ್ಮು ಕಡಿಮೆ ಆಗುತ್ತದೆ.

2. ಹುರಿದ ಸಾಸಿವೆ ಪುಡಿಯನ್ನು ಜೇನುತುಪ್ಪದೊಂದಿಗೆ ಬೆರೆಸಿ ದಿನಕ್ಕೆ ಮೂರು ಬಾರಿ ಸೇವಿಸಿದಾಗ ಕೆಮ್ಮು ಕಡಿಮೆ ಆಗುತ್ತದೆ.

✪ ✪

## ನೆಗಡಿಗೆ ಮದ್ದು

ಒಂದು ಲೋಟ ಹಾಲು, ಸಕ್ಕರೆಯೊಡನೆ ಒಂದು ಚಮಚ ಅರಿಶಿನ ಪುಡಿ ಹಾಕಿ ಕುದಿಸಿ ಕುಡಿದರೆ ನೆಗಡಿ ಕಡಿಮೆ ಆಗುವುದು. ನೆಗಡಿಯಾಗಿ ಉಸಿರಾಡಲು ಬಹಳ ತೊಂದರೆ ಆದರೆ ಮೂಗಿನ ಒಳಭಾಗಕ್ಕೆ ಬೆಣ್ಣೆಕಾಸಿದ ತುಪ್ಪವನ್ನು ಸವರಿಕೊಂಡರೆ ಹಿತವಾಗಿರುತ್ತದೆ.

✪ ✪

## ಹಲ್ಲು ನೋವಿಗೆ ಮದ್ದು

ಕಬ್ಬಿಣದ ಸೌಟನ್ನು ಚೆನ್ನಾಗಿ ಕಾಯಿಸಿ, ಅದರ ಮೇಲೆ ಸ್ವಲ್ಪ ಇಂಗು ಹಾಕಿ ನಂತರ ನಿಂಬೆಹಣ್ಣು ಹಿಂಡಿ, ಆ ರಸದಲ್ಲಿ ಹತ್ತಿಯನ್ನು ನೆನೆಸಿ ಹಲ್ಲು ನೋವಾದ ಜಾಗದಲ್ಲಿಟ್ಟರೆ, ನೋವು ಕಡಿಮೆ ಆಗುತ್ತದೆ.

✪ ✪

## ಉಗುರು ಸುತ್ತಿಗೆ ಮದ್ದು

ಉಗುರು ಸುತ್ತಾಗಿದ್ದರೆ ನಿಂಬೆಹಣ್ಣು ರಸವನ್ನು ಒಂದು ಬಟ್ಟೆಗೆ ಹಾಕಿ ನೆನೆಸಿ ಬೆರಳಿಗೆ ಸುತ್ತಿ ಆಗಾಗ್ಗೆ ಬಟ್ಟೆಗೆ ರಸ ಬಿಡುತ್ತಿದ್ದರೆ ನೋವು ಕಡಿಮೆ ಆಗಿ ಹುಣ್ಣು ಜಳ್ಳಾಗುತ್ತದೆ.

✪ ✪

## ಕಿವಿ ನೋವಿಗೆ ಮದ್ದು

ಬೆಳ್ಳುಳ್ಳಿ ಎರಡು ತುಣುಕುಗಳನ್ನು ಸ್ವಲ್ಪ ಎಣ್ಣೆಯಲ್ಲಿ ಕರಿದು, ಆ ಎಣ್ಣೆ ಆರಿದ ಮೇಲೆ ಎರಡು ಹನಿ ಎಣ್ಣೆಯನ್ನು ಕಿವಿಗೆ ಹಾಕಿದರೆ ಕಿವಿ ನೋವು ದೂರಾಗುತ್ತದೆ. ಕಿವಿ ಕೊಳೆಯೂ ಹೋಗುತ್ತದೆ.

✪ ✪

## ಮೊಡವೆಗೆ ಮದ್ದು

ಸೌತೆಕಾಯಿ ಹೆಚ್ಚಿದಾಗ ಬರುವ ಕಸರೆಯನ್ನು ಮುಖಕ್ಕೆ ಹಚ್ಚಿದರೆ ಮೊಡವೆಗಳು ಕಡಿಮೆ ಆಗುತ್ತದೆ.

ಕೆನೆಹಾಲಿಗೆ ನಿಂಬೆರಸ ಹಿಂಡಿ ರಾತ್ರಿ ಮಲಗುವ ಮುನ್ನ ಹಚ್ಚಿದರೆ ಮೊಡವೆ ಕಡಿಮೆ ಆಗುತ್ತದೆ.

ಪ್ರತಿದಿನ ಸ್ನಾನ ಮಾಡುವಾಗ ಸಾಬೂನಿನ ಬದಲು ಕಡೆಲೆಹಿಟ್ಟು ಹಚ್ಚಿದರೆ ಮೊಡವೆ ನಾಶ ಖಂಡಿತ.

*(ಅವರವರ ಚರ್ಮ ಪ್ರಕೃತಿಗೆ ತಕ್ಕಂತೆ ಒಣ, ಎಣ್ಣೆ, ಸಹಜ)*

✪ ✪

## ಚರ್ಮಕಾಂತಿ

ಮುಖದ ಚರ್ಮದ ಕಾಂತಿ ಹೆಚ್ಚಲು ಸ್ನಾನ ಮಾಡುವಾಗ ಮುಖಕ್ಕೆ ಅರಿಶಿನ ಸೇರಿಸಿದ ಹರಳೆಣ್ಣೆ ಹಚ್ಚಿ ಅರ್ಧ ಘಂಟೆ ಬಿಟ್ಟು ಸ್ನಾನ ಮಾಡುವುದು.

# ದಿನಚರಿ ಟಿಪ್ಸ್

## ಅಡುಗೆ ಮನೆಯಲ್ಲಿ

ಬಾಳೆಕಾಯಿ ಹೆಚ್ಚುವಾಗ ಕೈಗೆ ಮಜ್ಜಿಗೆಯನ್ನು ಸವರಿದರೆ ಕೈ ಕಪ್ಪಾಗುವುದಿಲ್ಲ.

ಫ್ಲಾಸ್ಕ್ ಉಪಯೋಗಿಸದಿದ್ದಾಗ ತೊಳೆದ ಫ್ಲಾಸ್ಕ್‌ನಲ್ಲಿ ಒಂದು ಸ್ಪೂನ್ ಸಕ್ಕರೆ ಹಾಕಿಡಬೇಕು.

ಹೆಪ್ಪು ಹಾಕಲು ಮೊಸರು ಇಲ್ಲದಿದ್ದರೆ ಸ್ವಲ್ಪ ನಿಂಬೆರಸ ಹಾಲಿಗೆ ಹಾಕಿದಾಗ ಸೊಗಸಾದ ಮೊಸರು ತಯಾರಾಗುತ್ತದೆ.


ಎರಡು ಹಿಡಿ ಹುರಿಗಡಲೆ ತಿಂದು ನೀರು ಕುಡಿಯದೆ ಇರಿ. ನೆಗಡಿ ಬಾಧೆಗೆ ಸ್ವಲ್ಪ ಉಪಶಮನ.

✪ ✪

## ಆಭರಣ

1. ಬಂಗಾರದ ಆಭರಣಗಳನ್ನು ಸಕ್ಕರೆ ಬೆರೆಸಿದ ನೀರಿನಲ್ಲಿ ತೊಳದರೆ ಥಳಥಳನೆ ಹೊಳೆಯುತ್ತದೆ.
2. ಬೆಳ್ಳಿ ಪಾತ್ರೆಗಳನ್ನು ವಿಭೂತಿಯಿಂದ ತಿಕ್ಕಿದರೆ ಹೊಳಪು ಹೆಚ್ಚುತ್ತದೆ.
3. ಕರ್ಪೂರ ಕರಗದಿರಲು, ಸ್ವಲ್ಪ ಮೆಣಸುಕಾಳನ್ನು ಅದರೊಂದಿಗೆ ಹಾಕಿಡುವುದು.
4. ಕೈಯಲ್ಲಿ ಸೀಮೆಎಣ್ಣೆ ವಾಸನೆ ಇದ್ದರೆ, ತಿಳಿಮಜ್ಜಿಗೆಯಿಂದ ಕೈಯನ್ನು ತೊಳೆಯಬೇಕು.
5. ಕೊಬ್ಬರಿ ಎಣ್ಣೆಗೆ ಮೆಂತೆಯನ್ನು ಹಾಕಿಟ್ಟು ತಲೆಗೆ ಹಚ್ಚಿಕೊಂಡು ಬಾಚಿದರೆ ಕೂದಲು ಆರೋಗ್ಯ ಹೆಚ್ಚುತ್ತದೆ.

✪ ✪



■ ಎಮ್.ಆರ್. ಸೂರ್ಯನಾರಾಯಣ
9844250572



## ಜಕ್ಕೂರಿನ ಶ್ರೀ ವೆಂಕಟಗಿರಿಯಪ್ಪನವರು

ನಮ್ಮ ಸಮುದಾಯದ ಹಿರಿಯರೂ ಹಾಗೂ ನನ್ನ ಪಿತಾಮಹರಾಗಿದ್ದ ಜಕ್ಕೂರಿನ ಶ್ರೀ ವೆಂಕಟಗಿರಿಯಪ್ಪನವರು (1910–1972) ಜಕ್ಕೂರು ಶಾಮಣ್ಣನೆಂದೇ ಪರಿಚಿತ. ಕರ್ನಾಟಕ ಸಂಗೀತ ಮತ್ತು ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ದೈನಂದಿನ ಜೀವನದಲ್ಲಿ ಶಿಸ್ತಿಗೆ ಪ್ರಾಧಾನ್ಯತೆ ಕೊಟ್ಟಿದ್ದ ಇವರು ಸಮಾಜ ಹಿತದಲ್ಲಿ ಕಾಳಜಿಯನ್ನಿಟ್ಟು ಕೊಂಡಿದ್ದರು. ವ್ಯಕ್ತಾತ್ಮಕ ಕಲಾಪಂಡಿತರಾಗಿದ್ದ ಶ್ರೀಯುತ ರಾಮರಾವ್ ನಾಯಕ್, ವಿ. ಸೀತಾರಾಮಯ್ಯ, ಹೊನ್ನಪ್ಪ ಭಾಗವತರುಗಳಂತಹವರ ಒಡನಾಟವಿದ್ದ ವೆಂಕಟಗಿರಿಯಪ್ಪನವರು “ಆನಂದರಾಮ” ಎಂಬ ಕಾವ್ಯನಾಮದಲ್ಲಿ ದೇವರನಾಮ ಶೈಲಿಯಲ್ಲಿ ಕೃತಿಗಳನ್ನು ರಚಿಸಿದ್ದಾರೆ.

1940ರಲ್ಲಿ ಶ್ರೀಯುತರು ಸುಮಾರು 50 ದೇವರನಾಮಗಳ ಸಂಕಲನವನ್ನು “ಆನಂದ ಗೀತಾವಳಿ” ಎಂಬ ಶೀರ್ಷಿಕೆಯಡಿ ಹರಿದಾಸ ಪಂಥದ ಶೈಲಿಯಲ್ಲಿ ರಚಿಸಿ ಆಗ ಅಸ್ತಿತ್ವದಲ್ಲಿದ್ದ ಆನಂದ ಸೇವಾ ಮಂಡಲಿಗೆ ಅರ್ಪಿಸಿದರು. ಈ ಸಂಕಲನಕ್ಕೆ ಹರಿಕಥಾಂಬುಧಿ ಚಂದ್ರ ಟಿ. ಕೆ.ವೇಣುಗೋಪಾಲದಾಸರು ಮುನ್ನುಡಿ ಬರೆದಿದ್ದಾರೆ. 2015ರಲ್ಲಿ ಈ ಸಂಕಲನ 75 ವರ್ಷಗಳನ್ನು ಪೂರೈಸುವ ಸಂಭ್ರಮದಲ್ಲಿದೆ.

ಈ ಮಹನೀಯರಿಗೆ ನಮಸ್ಕಾರಗಳು.

■ ಅನಿಲ್ ಕೌಂಡಿಣ್ಯ



## ಬೃಹಚ್ಚರಣ

ಬೃಹಚ್ಚರಣ ನಮಗೆಲ್ಲಾ ಒಂದು ಆಭರಣ

ನಮ್ಮ ಶಕ್ತಿ, ಪ್ರತಿಭೆಗಳ ಅನಾವರಣ
ನಮ್ಮೆಲ್ಲರನ್ನೂ ಜೋಡಿಸುವ ತಾಣ

ಬೃಹಚ್ಚರಣದಲಿ ನಾವು, ಸೇರಿದಂತೆ ಮಾವು–ಬೇವು

ವಿಧವಿಧ ಲೇಖನ – ಕವನಗಳ ಸಾರ
ಇದರಲ್ಲಿದೆ ನಮ್ಮೆಯ ಜೀವನ ಸಾರ

■ ಅರುಣ್ ಕಾಚರಕನಹಳ್ಳಿ ಸೇತುರಾಂ




# ಕಾರಿನ ಸ್ವಗತ!

ಮೊದಲ ನೋಟದಲ್ಲೇ ನೀನು ನನಗೆ ಸೋತೆ. ಮನೆಯವರನ್ನು ಒಲ್ಲೈಸಿ ನನ್ನನ್ನು ನಿನ್ನ ಮನೆಗೆ ಕರೆತಂದೆ. ನಂತರ ನಿನ್ನ ಜೊತೆಗೆ ಸ್ನೇಹ ಬೆಳೆಯಿತು, ಸ್ನೇಹ ಪ್ರೇಮವಾಯಿತು. ಎಲ್ಲಿಗೆ ಹೋದರೂ ನೀನು ನನ್ನೊಂದಿಗೆ ಬರುತ್ತಿದ್ದೆ. ನಾನು ಇಲ್ಲದೇ ನೀನು ಇರದಾದೆ. ನನ್ನೊಂದಿಗೆ ನೀನು ಬೆರೆತುಹೋದೆ. ನನ್ನನ್ನು ಮನೆಗೆ ಕರೆತಂದ ಹೊಸತರಲ್ಲಿ, ನನ್ನನ್ನು ನೋಡಿಕೊಂಡ ರೀತಿ ನನಗೆ ಇಂದಿಗೂ ನೆನಪಿದೆ. ದಿನವೂ ನನ್ನ ಒರೆಸುವುದು, ಚಕ್ರಗಳಿಗೆ ಮಣ್ಣು ಮೆತ್ತಿದ್ದರೆ ನೀರು ಹಾಕಿ ತೊಳೆಯುವುದು, ನಂತರ ಒಣಗಿದ ಬಟ್ಟೆಯಿಂದ ಒರೆಸುವುದು, ಎಲ್ಲಾ ನೆನಪಿದೆ. ನನ್ನನ್ನು ತಣ್ಣೀರಿನಿಂದ ತೊಳೆದಾಗಲೆಲ್ಲಾ ನನಗೆ ಚಳಿ ಆಗಬಾರದೆಂದು ನನ್ನನ್ನು ಒರೆಸಿದ ಬಳಿಕ ಬಿಸಿಲಿನಲ್ಲಿ ಕಾಯಿಸುತ್ತಿದ್ದೆ. ಆಗ ಸೂರ್ಯನ ಶಾಖ ತಗುಲಿ ಮೈ ಬೆಚ್ಚಗಾಗುತ್ತಿತ್ತು. ನನಗೆ ಹುಮ್ಮಸ್ಸು ಬರುತ್ತಿತ್ತು. ನನ್ನನ್ನು ಹುರಿದುಂಬಿಸಿದಾಗಲೆಲ್ಲ ನಾನು ಜೋರಾಗಿ ಓಡ್ತಿದ್ದೆ. ಓಡಿ, ಓಡಿ, ನನಗೆ ಸುಸ್ತಾದಾಗ ನನ್ನನ್ನು ನಿಲ್ಲಿಸಿ ನೀನು ವಿಶ್ರಾಂತಿ ಪಡೆಯುತ್ತಿದ್ದೆ. ನನಗೋಸ್ಕರ ಒಂದು ಗೂಡು ಕಟ್ಟಿಸಿಕೊಟ್ಟೆ, ನಾನು ಅದರಲ್ಲಿ ಇರಲು ಶುರು ಮಾಡಿದೆ. ನನ್ನನ್ನೂ ನಿಮ್ಮವರಲ್ಲೊಬ್ಬಳಂತೆ ಭಾವಿಸಿದೆ. ನನಗೂ ಆಗ ವಯಸ್ಸಿತ್ತು, ಚೆನ್ನಾಗಿ ಓಡುವ ಶಕ್ತಿ ಇತ್ತು. ಹಬ್ಬದ ದಿನ, ನನ್ನನ್ನು ಚೆನ್ನಾಗಿ ತೊಳೆದು, ಪೂಜೆ ಸಲ್ಲಿಸುತ್ತಿದ್ದೆ.

ನನ್ನ ನಿಜವಾದ ಶಕ್ತಿ ಪ್ರದರ್ಶನವಾದದ್ದು ಕೊಡಚಾದ್ರಿಗೆ ಹೋದಾಗ. ನನ್ನ ಶಕ್ತಿ ಮೀರಿ ಓಡ್ತಿದ್ದೆ. ಆದರೆ ನನಗೆ ವಯಸ್ಸಾಗಿದೆ ಎಂಬ ಸುಳಿವೂ ಇರಲಿಲ್ಲ. ಓಡಿ, ಓಡಿ, ನನಗೂ ದಣಿವಾಗಿತ್ತು. ಹೇಗೋ ನನ್ನನ್ನು ಕ್ಷೇಮವಾಗಿ ಮನೆಗೆ ಕರೆತಂದೆ. ನಂತರ ನನ್ನ ದಣಿವನ್ನು ಇಂಗಿಸಲು ಒಂದು ವಾರ ಬೇಕಾಯಿತು. ಅಂದಿನಿಂದ ನೀನು, ನನಗೆ ಇನ್ನೂ ಹೆಚ್ಚು ಆರೈಕೆ ಮಾಡಿದೆ. ಎಲ್ಲರಿಗೂ ವಯಸ್ಸಾಗುತ್ತದೆ. ಅಲ್ಲವೇ? ಹಾಗೆಯೇ ನನಗೂ ಸಹ ವಯಸ್ಸಾಗಿದೆ ಎಂಬ ಅರಿವು ಮೂಡಿತು. ನಂತರ ನನ್ನನ್ನು ಹೊರಗೆ ಕರೆದುಕೊಂಡು ಹೋಗುವುದನ್ನು ನಿಲ್ಲಿಸಿದೆ. ಜೊತೆಗೆ ಪೆಟ್ರೋಲ್ ಬೆಲೆ ಕೂಡ ಏರುತ್ತಾ ಹೋಯಿತು. ನಾನು ನನ್ನ ಗೂಡಿನಲ್ಲಿಯೇ ಹೆಚ್ಚು ಕಾಲ ಕಳೆಯಬೇಕಾಯಿತು. ನೀನು ಒಬ್ಬೊಬ್ಬನೇ ಹೊರಗೆ ಹೋಗುವಾಗ ನನ್ನನ್ನು ಮನೆಯಲ್ಲಿಯೇ ಬಿಟ್ಟು ಹೋಗುತ್ತಿದ್ದೆ. ಆದರೆ ಮನೆಯವರೆಲ್ಲರೂ ಹೊರಗೆ ಹೋಗುವಾಗ ಮಾತ್ರ ನನ್ನನ್ನು ಕರೆದುಕೊಂಡು ಹೋಗುತ್ತಿದ್ದೆ. ದಿನ ನನ್ನ ಜೊತೆ ಹೋಗುತ್ತಿದ್ದ ನೀನು, ವಾರಕ್ಕೊಮ್ಮೆ ನನ್ನೊಂದಿಗೆ ಬರುತ್ತಿದ್ದೆ. ನನಗೂ ಈ ಸೂಕ್ಷ್ಮಗಳು ತಿಳಿಯುವ ಹೊತ್ತಿಗೆ ನನ್ನಲ್ಲೂ ಕೆಲವು ದೋಷಗಳಿವೆ ಎಂದು ಅರಿತೆ.

ಕಳೆದ ಐದು ವರ್ಷಗಳಿಂದ ನಿನ್ನ ಜೊತೆ ಇದ್ದೆ. ನನ್ನನ್ನು ಎಲ್ಲಿಗೆ ಬೇಕೋ ಅಲ್ಲಿಗೆ ಕರೆದುಕೊಂಡು ಹೋದೆ. ಅಷ್ಟೇ ಕ್ಷೇಮವಾಗಿ ಕರೆತಂದೆ. ನಾನು ನೀನು ಜೊತೆಯಲ್ಲಿ ನೋಡಿದ ಜಾಗಗಳು ಅದೆಷ್ಟೋ?

ಇಂದು, ನಾನು ನಿನ್ನಿಂದ ದೂರವಾಗಿದ್ದೇನೆ. ಹೊಸ ಮನುಷ್ಯರೊಂದಿಗೆ ನನ್ನ ಒಡನಾಟ ಶುರುವಾಗಲಿದೆ. ಅವರೂ ನಿನ್ನಷ್ಟೇ ಪ್ರೀತಿ ತೋರುತ್ತಾರೆ ಎಂಬ ನಂಬಿಕೆ ಇದೆ. ನಿನಗೆ ಒಳ್ಳೆಯದಾಗಲಿ.



■ ಅನಿಲ್ ರಮೇಶ್
9980027189



# ಅಡುಗೆ

## ಹಿದಕಪ್ಪಿ ಕೋಡುಬಳೆ

**ಬೇಕಾಗುವ ಸಾಮಾನು:**

ಒಂದು ಪಾವು ಅಕ್ಕಿಹಿಟ್ಟು, 1/4 ಬಟ್ಟಲು ಹಿದಕವರೆ, 4 ಚಮಚ ತೆಂಗಿನತುರಿ, ರುಚಿಗೆ ತಕ್ಕಷ್ಟು ಉಪ್ಪು, ಒಣಮೆಣಸಿನಕಾಯಿ 10, ಹಿಂಗು 1/4 ಚಮಚ, ಜೀರಿಗೆ 1/2 ಚಮಚ, ಕರಿಯಲು ಎಣ್ಣೆ.

**ಮಾಡುವ ವಿಧಾನ:**

ಹಿದುಕಿದ ಅವರೆಯನ್ನು ಬೇಯಿಸಿ, ಜೀರಿಗೆ, ಒಣಮೆಣಸಿನಕಾಯಿ, ಹಿಂಗು, ತೆಂಗಿನತುರಿ, ಉಪ್ಪು ನುಣ್ಣಗೆ ರುಬ್ಬಿಕೊಳ್ಳಿ, ಅಕ್ಕಿಹಿಟ್ಟಿಗೆ ರುಬ್ಬಿದ್ದು ಹಾಕಿ, ಬೆಂದ ಹಿದುಕಿದ ಅವರೆಬೇಳೆ ಹಾಕಿ, 4 ಚಮಚ ಕಾಯಿಸಿದ ಎಣ್ಣೆ ಎಲ್ಲಾ ಹಾಕಿ ಕಲೆಸಿ ಕೋಡುಬಳೆ ಹೊಸೆದು ಎಣ್ಣೆಯಲ್ಲಿ ಕರೆಯಿರಿ.

ರುಚಿ ತಿನಿಸು ಸವಿಯಲು ಸಿದ್ಧ.

## ಪೆರಿಚರಣದ ಕರಿಗಡುಬು

ಇದು ಗೌರಿಹಬ್ಬದ ಸಮಯದಲ್ಲಿ ಸೋಗಲಕ್ಕಿ ಇಡಲು ಮಾಡುವ ಭಕ್ಷ್ಯ

**ಬೇಕಾಗುವ ಸಾಮಾನು:**

ಒಂದು ಬಟ್ಟಲು ತೊಗರಿಬೇಳೆ, ಒಂದು ಬಟ್ಟಲು ಬೆಲ್ಲ, ಅರ್ಧ ಬಟ್ಟಲು ತೆಂಗಿನ ತುರಿ, 2 ಏಲಕ್ಕಿ, ಒಂದು ಪಾವು ತೊಳೆದ ಅಕ್ಕಿಹಿಟ್ಟು, ಕರಿಯಲು ಎಣ್ಣೆ.

**ಮಾಡುವ ವಿಧಾನ:**

ತೊಗರಿಬೇಳೆಯನ್ನು ಉಗುರು ಇಳಿಯುವಷ್ಟು ಬೇಯಿಸಿ ಆಮೇಲೆ ನೀರು ಸೋಸಿ ಅದಕ್ಕೆ ಬೆಲ್ಲ, ತೆಂಗಿನ ತುರಿ, ಏಲಕ್ಕಿ ಹಾಕಿ ನುಣ್ಣಗೆ ರುಬ್ಬಿ ಹೂರಣವನ್ನು ತಯಾರಿಸಿಕೊಳ್ಳಿ, ತೊಳೆದ ಅಕ್ಕಿಹಿಟ್ಟು ಕಲೆಸಿ ಕಡುಬಿನ ಆಕಾರಕ್ಕೆ ಮಾಡಿ, ಒಳಗೆ ಹೂರಣ ಇಟ್ಟು, ಮುಚ್ಚಿ, ಎಣ್ಣೆಯಲ್ಲಿ ಕರಿಯುವುದು.

■ ಶಾರದಮ್ಮ

ಲೇಖಕರು ನಮ್ಮ ಪೆರಿಚರಣ ಭಾಷೆಯಲ್ಲಿ ಕಳುಹಿಸಿದ ಅಡುಗೆಯನ್ನು ಕನ್ನಡದಲ್ಲಿ ಹಾಕಲಾಗಿದೆ.

## 13/7ರ 'ನಮ್ಮ ಸಮಾರಂಭ'

ಹಿರಿಯ ಚೇತನರಿಗೆ ಚೈತನ್ಯ ನೀಡಿದ ಸಮಾರಂಭ
ಕಿರಿಯ ಪ್ರತಿಭೆಗಳಿಗೆ ಸ್ಫೂರ್ತಿ ಕೊಡುವ ಶುಭಾರಂಭ

ಹಿರಿ ಹಿಗ್ಗುವ ಸ್ವಜನ ಸೇರಿ ನಡೆಸುವ,
ಆರಂಭದಿಂದಲೇ ಕಳೆಕಟ್ಟಿದ ಸಭಾರಂಭ

ದಕ್ಷತೆಯ ಭೋಜನ ಕೂಟದಿ ಸಂತೃಪ್ತರಾಗಿ
ಹರಸಿ-ಹಾರೈಸಿದವರಲ್ಲೊಬ್ಬರು ಭ್ರಮರಾಂಭ

■ ಭ್ರಮರ ಗೋಪಿನಾಥ್

## ಚಿಣ್ಣರಿಗೆ ಒಗಟು....

- ಹೊಟ್ಟೆ ಮೇಲೆ ಹೊಟ್ಟೆ.
- ಚಿಕ್ಕ ವೀಣೆ ಬಾಲಯ್ಯ, ದೊಡ್ಡ ಕೋಣೆ ತುಂಬಾ ಬಾರಿಸ್ತಾನೆ.
- ಹಿಡಿದರೆ ಹಿಡಿ ತುಂಬಾ, ಬಿಟ್ಟರೆ ಮನೆ ತುಂಬಾ.
- ಗೋಡೆಲಿ ಕರಿ ರೊಟ್ಟಿ ಸುಟ್ಟಿದ್ದಾರೆ.
- ಮನೆ, ಮನೆಗೆ ಎರಡು ಬಾಗಿಲು, ಬಾಗಿಲ ಮುಂದೆ ಬಾವಿ.
- ಬಿಳಿಯ ಗೋಡೆ ಮೇಲೆ, ಕರಿಯ ಚುಕ್ಕೆ.
- ಆಕಾರದೊಳಗಿನ ಗಿಣಿ, ಊಟದ ಹೊತ್ತಿಗೆ ರಾಣಿ.
- ಎರಡು ಬಾವಿಗಳ ನಡುವೆ ಸೇತುವೆ.
- ತಲೆ ಇಲ್ಲ, ನಡುವಿಲ್ಲ, ಕೈಗಳಿದ್ದರೂ ಬೆರಳಿಲ್ಲ.
- ಆಕಾಶದಲ್ಲಿ ಕೊಡಲಿಗಳು ತೇಲುತ್ತವೆ.
- ಆಕಾಶದಲ್ಲಿ ಅರಿವೆಗಳು ಹರಡಿದೆ.
- ಬಾನಲ್ಲಿ ಬೆಣ್ಣೆ ಮುದ್ದೆಗಳು ತೇಲಾಡಿವೆ.
- ತೀರ್ಥ ಕುಡಿದರೆ ಸಾವು.
- ಅಪ್ಪನಿಗೆ ಕಜ್ಜಿ, ಮಗ ಮುದ್ದುಗಾರ.
- ಅಪ್ಪನಿಗೆ ಸಾಯುವಾಗ, ಮಗಳು ಅಳುತ್ತಾಳೆ.
- ಹಬ್ಬಾ ಅಂತ ಬಂದು ಬೇವು, ಬೆಲ್ಲ ಕೇಳುತ್ತೆ.
- ಅಮ್ಮನವರು ಅಗಲ, ಅಯ್ಯನವರು ಉದ್ದ.
- ಸುಣ್ಣಕ್ಕಿಂತ ಬಿಳಿ, ಕಾಗೆಗಿಂತ ಕಪ್ಪು.
- ಒಂದು ಮನೆಗೆ, ಒಂದೇ ತೊಲೆ.

**ಉತ್ತರಗಳು:**

ಬೀಸುವ ಕಲ್ಲು, ಸೊಳ್ಳೆ, ದೀಪದ ಬೆಳಕು, ಬೆರಣಿ, ಮೂಗು–ಬಾಯಿ, ಕಣ್ಣು, ಬಾಳೆಎಲೆ, ಮೂಗು, ಕೋಟು ಅಂಗಿ, ಹುಣಿಸೇಹಣ್ಣು, ಮೋಡಗಳು, ಮೋಡ, ವಿಷ, ಹಲಸಿನಹಣ್ಣು–ತೊಳೆ, ವಿಭೂತಿ ಪಟ್ಟಿ, ಕುಂಕುಮ, ಈರುಳ್ಳಿ ಹೆಚ್ಚಿದಾಗ, ಯುಗಾದಿ ಹಬ್ಬ, ಬಾವಿ–ಹಗ್ಗ, ಕಣ್ಣು, ತಲೆ

## ಮನವಿ

**ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನಿಸಿದಂತೆ ಸಂಘದ ಕಾರ್ಯ ನಿರ್ವಹಣಾ ವಾರ್ಷಿಕ ವೆಚ್ಚಕ್ಕಾಗಿ, ಪ್ರತಿ ಸದಸ್ಯರೂ, ಪೋಷಕರು ಕನಿಷ್ಟ 250/– ರೂ.ಗಳನ್ನು ನೀಡಬೇಕೆಂದು ಸದಸ್ಯರಲ್ಲಿ ಸಂಘ ಮನವಿ ಮಾಡುತ್ತದೆ.**

## ಪೋಷಕ ಸದಸ್ಯರಾಗಲು ಮನವಿ

ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನಿಸಿದಂತೆ ಈಗಾಗಲೇ 1,000/–ರೂ.ಗಳನ್ನು ನೀಡಿ ಸದಸ್ಯರಾಗಿರುವವರು ಬಾಕಿ 4,000/– ರೂ.ಗಳನ್ನು (ಅವಶ್ಯವಿದ್ದರೆ 4 ಕಂತುಗಳಲ್ಲಿ) ನೀಡಿ **'ಪೋಷಕ'** ಸದಸ್ಯರಾಗಬಹುದು. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ವಿನಂತಿ.

ತಾವುಗಳು ಈ ಮನವಿಗೆ ಸ್ಪಂದಿಸಿದಲ್ಲಿ ಸಂಘದ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಲು ಸಹಾಯವಾಗುತ್ತದೆ



ಚಿಣ್ಣರಪುಟ

## ಕಳ್ಳ - ಕುಳ್ಳ

ಯಾರು ಈ ಕಳ್ಳ–ಕುಳ್ಳ? ಕಳ್ಳನೇ ಶ್ರೀಕೃಷ್ಣ, ಕುಳ್ಳನೇ ಶ್ರೀವಾಮನ. ಇದು ದೈತ್ಯರು ಹೇಳಿದ ಮಾತು. ಆದರೆ ಸಾಮಾನ್ಯ ಮಾನವರು ಇದನ್ನು ದುರುಪಯೋಗ ಮಾಡಿ ಕಳ್ಳನ್ನ ನಂಬಿದರೂ ಕುಳ್ಳನ್ನ ನಂಬಬಾರದು ಎಂದು ಸಂಬಂಧಗಳಿಗೆ ಉಪಯೋಗಿಸಿ ಮನ ನೋಯಿಸುತ್ತಾರೆ. ಯಾರೂ ಸೃಷ್ಟಿಮಾಡಿಕೊಂಡು ಬಂದವರಲ್ಲ. ಎಲ್ಲರೂ ಬ್ರಹ್ಮನ ಸೃಷ್ಟಿಯೇ. ಆದರೆ ಅನುವಂಶಿಕದಿ ದೇಹದ ಆಕಾರ ಬಂದಿರುತ್ತದೆ ಇದಕ್ಕೆ ಯಾರೂ ಹೊಣೆಯಲ್ಲ.

ಶ್ರೀಕೃಷ್ಣ ಬೆಣ್ಣೆ ಕದ್ದ ಕಳ್ಳ, ಶ್ರೀವಾಮನ ತೋರಿದ ಮೂರು ಪುಟ್ಟ ಪಾದದ ಭೂಮಂಡಲ ಅಳೆದ ತ್ರಿವಿಕ್ರಮನ ವಿಶ್ವರೂಪ ಲೀಲೆ ಕಂಡು, "ಕೃಷ್ಣನ್ನ ನಂಬಿದರೂ ವಾಮನನನ್ನು ನಂಬಲಾಗದು" ಎಂದು "ಕಳ್ಳನ್ನ ನಂಬಿದರೂ ಕುಳ್ಳನ್ನ ನಂಬಬಾರದು" ಎಂಬ ಗಾದೆ ಮಾತಾಯಿತು.

■ ಭ್ರಮರ ಗೋಪಿನಾಥ

## ಹಬ್ಬಗಳು

ಪಾಡ್ಯ = ಬಲಿಪಾಡ್ಯಮಿ
ಬಿದಿಗೆ = ಭಾವ ಬಿದಿಗೆ
ತದಿಗೆ = ತದಿಗೆ ಗೌರಿ
ಚೌತಿ = ವಿನಾಯಕ ಚೌತಿ
ಪಂಚಮಿ = ನಾಗಪಂಚಮಿ
ಷಷ್ಠಿ = ಕುಮಾರಷಷ್ಠಿ / ಸಿರಿಯಾಳ
ಸಪ್ತಮಿ = ರಥಸಪ್ತಮಿ
ಅಷ್ಟಮಿ = ಕೃಷ್ಣಾಷ್ಟಮಿ / ದುರ್ಗಾಷ್ಟಮಿ
ನವಮಿ = ರಾಮನವಮಿ / ಮಹಾನವಮಿ
ದಶಮಿ = ವಿಜಯದಶಮಿ
ಏಕಾದಶಿ = ವೈಕುಂಠ ಏಕಾದಶಿ
ದ್ವಾದಶಿ = ಉತ್ಥಾನದ್ವಾದಶಿ
ತ್ರಯೋದಶಿ = ಶಿವರಾತ್ರಿ / ಧನ್ವಂತರಿ ತ್ರಯೋದಶಿ
ಚತುರ್ದಶಿ = ಅನಂತ/ನರಕ ಚತುರ್ದಶಿ
ಹುಣ್ಣಿಮೆ = ಉಪಾಕರ್ಮ/ನೂಲುಹುಣ್ಣಿಮೆ
ಅಮಾವಾಸ್ಯೆ = ಮಹಾಲಯ ಅಮಾವಾಸ್ಯೆ

## ಭಗವದ್ಗೀತೆಯ ಕೆಲವು ವಿಚಾರಗಳು

- ಭಗವದ್ಗೀತೆಯನ್ನು ಭಗವಂತನಾದ ಶ್ರೀಕೃಷ್ಣನು ಪಾಂಡವ ಶ್ರೇಷ್ಠನಾದ ಅರ್ಜುನನಿಗೆ ಉಪದೇಶ ಮಾಡಿದನು.
- ಗೀತೆಯಲ್ಲಿ ಒಟ್ಟು 700 ಶ್ಲೋಕಗಳಿವೆ, 18 ಅಧ್ಯಾಯಗಳಿವೆ.
- 3 ಷಡ್ಕಗಳಾಗಿ ವಿಂಗಡಿಸಿ ಮೊದಲ 6 ಅಧ್ಯಾಯಗಳನ್ನು ಕರ್ಮಯೋಗ, 7 ರಿಂದ 12ನೇ ಅಧ್ಯಾಯಗಳನ್ನು ಭಕ್ತಿಯೋಗವೆಂದೂ ಮತ್ತು ಕಡೆಯ 6 ಅಧ್ಯಾಯಗಳನ್ನು ಜ್ಞಾನಯೋಗವೆಂದೂ ಹೇಳಿದ್ದಾರೆ.
- ಗೀತೆಯನ್ನು ಭಗವಾನ ವೇದವ್ಯಾಸರು ಮಹಾಭಾರತ ಮಹಾ ಇತಿಹಾಸದಲ್ಲಿ ಉಲ್ಲೇಖಿಸಿದ್ದಾರೆ.
- ಭಗವಾನ್ ಶ್ರೀಕೃಷ್ಣನು ಭಕ್ತಿ, ಕರ್ಮ, ಜ್ಞಾನ ಯಾವುದೇ ಮಾರ್ಗವನ್ನು ಶ್ರದ್ಧೆಯಿಂದ ಅನುಸರಿಸಿದವರು ಮುಕ್ತಿಯನ್ನು ಹೊಂದುತ್ತಾರೆ ಅಂದರೆ ಅವನನ್ನೇ ಸೇರುತ್ತಾರೆ ಎಂದು ತಿಳಿಸಿದ್ದಾನೆ.
- ತ್ಯಾಗಾತ್ ಅನಂತರಂ ಶಾಂತಿ = ತ್ಯಾಗದ ಅನಂತರವೇ ಶಾಂತಿ ಸಿಗುವುದು.
- ಅಶಾಂತಸ್ಯ ಕುತಃ ಸುಖಂ = ಅಶಾಂತಿಯುಳ್ಳವನಿಗೆ ಸುಖ ಎಲ್ಲಿಹುದು?
- ಶ್ರದ್ಧಾವಾನ್ ಲಭತೇ ಜ್ಞಾನ = ಶ್ರದ್ಧಾವಂತನಿಗೇ ಜ್ಞಾನ ಲಭಿಸುವುದು.
- ನಷ್ಟೋ ಮೋಹ ಸ್ಮೃತಿ ಲಬ್ಧ್ವಾ = ಮೋಹ ನಶಿಸಿ ಜ್ಞಾನ ದೊರಕಿತು.
- ಗೀತೆಯು ಕುರುಕ್ಷೇತ್ರ ಸಮಯದಲ್ಲಿ ಯುದ್ಧ ಭೂಮಿಯಲ್ಲೇ ಬೋಧನೆಯಾದದ್ದು.
- ಗೀತೆಯಲ್ಲಿ ಬರುವ ಅರ್ಜುನನಿಗೆ ಹೇಳಿರುವ ಮಾತುಗಳನ್ನೆಲ್ಲಾ ಅರ್ಜುನನನ್ನು ನಾವಾಗಿ ತಿಳಿದಾಗ ಇನ್ನೂ ಚೆನ್ನಾಗಿ ಅರ್ಥ ಆಗುತ್ತದೆ.

■ ಎಚ್.ಆರ್. ಲಲಿತಾ, 9945199637

## ಐದು ವ್ಯತ್ಯಾಸ ಕಂಡು ಹಿಡಿಯಿರಿ

■ ಗೋವಿಂದರಾವ್ ಡಿ.



# ಓದುಗರ ಪತ್ರಗಳು




*ಮಾನ್ಯ ಸಂಪಾದಕರು,*
ಬೃಹಚ್ಚರಣ ಸಂಘ

ದಿನಾಂಕ : 13–7–2014ರಲ್ಲಿ ನಡೆದ ಸಂಘದ ವಾರ್ಷಿಕ ಸಭೆಯಲ್ಲಿ ಭಾಗವಹಿಸಿದ್ದೆ. ಆಗಮಿಸಿದ ಸಂಘದ ಸದಸ್ಯರ ಉಲ್ಲಾಸ, ತಮ್ಮವರ ಭೇಟಿಗೆ ಅವರಿಗಿದ್ದ ತವಕ, ಸಂಭ್ರಮ ಇದೆಲ್ಲಕ್ಕಿಂತ ಹೆಚ್ಚಾಗಿ ಬಂಧು ಬಳಗಗಳ ಇಷ್ಟಮಿತ್ರರ ಕಾಣಲು ಸಂಘದ ವಾರ್ಷಿಕ ಸಭೆಯು ವೇದಿಕೆಯಾಗಿದ್ದ ಸಂತೋಷ ಉಂಟು ಮಾಡಿತು. ಸಭೆಯು ಅತ್ಯಂತ ಅಚ್ಚುಕಟ್ಟಾಗಿ ಮುಕ್ತಾಯವಾದದ್ದು ಹರ್ಷದಾಯಕ ಸಮಾಚಾರ.

ಇನ್ನು ವಾರ್ಷಿಕ ಆಯವ್ಯಯದ ಲೆಕ್ಕಪತ್ರ ಪರಾಮರ್ಷಿಸಿದರೆ, ಉತ್ತಮ ಭವಿಷ್ಯದ ಎಲ್ಲಾ ಲಕ್ಷಣಗಳು ತಿಳಿದುಬರುತ್ತದೆ. ನಿಶ್ಚಿತ ಡಿಪಾಸಿಟ್ ಹೆಚ್ಚಳ, ವಾರ್ಷಿಕ ವೆಚ್ಚವನ್ನು ವಾರ್ಷಿಕ ವರಮಾನದ ಮಿತಿಯಲ್ಲಿ ಸರಿದೂಗಿಸುವ ಕಾರ್ಯನಿರ್ವಾಹಕ ಮಂಡಳಿಯ ನೈಪುಣ್ಯತೆ ಮೆಚ್ಚಬೇಕಾದ ವಿಷಯ ಸಂಘದ ವಾರ್ಷಿಕ ನಿರ್ವಹಣಾ ವೆಚ್ಚ ರೂ. 250/– ಎಲ್ಲಾ ಸದಸ್ಯರೂ ನೀಡುವುದ ಸಂಘದ ಬೆಳವಣಿಗೆಗೆ ಅವಶ್ಯ. ಅಂತೆಯೆ ಸಂಘದ ಪ್ರತಿಯೊಂದು ಚಟುವಟಿಕೆಗಳಲ್ಲಿ ಸದಸ್ಯರು ತೋರುತ್ತಿರುವ ಆಸಕ್ತಿ ಮತ್ತು ಉತ್ಸಾಹ ಪರಿಣಾಮಕಾರಿಯಾಗಿ ಮುಕ್ತಾಯವಾಗುತ್ತಿರುವುದು ಉತ್ತಮ ಉಜ್ವಲ ಭವಿಷ್ಯದ ಸಂಕೇತ.

ಸಂಘವು ಇದೇ ರೀತಿ ಸಕಲ ಶ್ರೇಯೋಭಿವೃದ್ಧಿಗೆ ಬರಲೆಂದು ನಿರಂತರ ಹಾರೈಸುತ್ತಿರುವ.

ನಿಮ್ಮ ಹಿತೈಷಿ

ಇಂತಿ

■ **ಆರ್.ವಿ. ಗೋಪಿನಾಥ್**



★ ★

*ಅಧ್ಯಕ್ಷರಿಗೆ,*

*ಸಂಘದ ಕಾರ್ಯ ಶ್ಲಾಘನೀಯ*

ತಾ॥ 13–7–2014ರಂದು ನಡೆದ ಸಂಘದ 2013–14ರ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯೊಂದಿಗೆ ಸಂಘವು ಏರ್ಪಡಿಸಿದ್ದ ಸಮುದಾಯದ ವಿದ್ಯಾರ್ಥಿಗಳಿಗೆ "ಪ್ರತಿಭಾ ಪುರಸ್ಕಾರ" ಕಾರ್ಯಕ್ರಮವು ನೆರೆದಿದ್ದವರ ಮನಸೂರೆಗೊಂಡು ಮುದ ನೀಡಿತ್ತು. ಈ ರೀತಿ 'ಪ್ರತಿಭಾ ಪುರಸ್ಕಾರ' ನೀಡುವ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಉದ್ದೇಶವು ಶ್ಲಾಘನೀಯ. ವಿದ್ಯಾರ್ಥಿಗಳು ಪುರಸ್ಕಾರ ಸ್ವೀಕರಿಸಲು ಉತ್ಸಾಹದಿಂದ ಹೋಗುತ್ತಿದ್ದಾಗ ಅವರ ಹೆತ್ತವರಿಗೆ, ಪೋಷಕರಿಗೆ ಹೆಮ್ಮೆ ಎನಿಸುತ್ತಿತ್ತು.

ಅತ್ಯಂತ ಯಶಸ್ವಿಯಾಗಿ ಸಂಘ ಉತ್ತಮ ಕಾರ್ಯಗಳನ್ನು ನಿರ್ವಹಿಸುತ್ತಿರುವುದಕ್ಕೆ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ನಿಜಕ್ಕೂ ಅಭಿನಂದನಾರ್ಹರು.

ಇಂತಿ

■ **ಸರ್ವಮಂಗಳಾ ಶ್ರೀನಿವಾಸ್**

■ **ಎಚ್.ಪಿ. ಶ್ರೀನಿವಾಸ್**

**41632687**



*If un Delivered please return to :*
*President*
**'Brihacharana Sangha'** No. 8, 3rd Cross, Annaiyyappa Block, Kumarapark West, Bengaluru-560 020.



# ನಾಗೇಶ್ವರ ಕ್ಷೇತ್ರ ಮಹಿಮೆ

ಕಿತ್ತಗಾನ ಹಳ್ಳಿ ಕ್ಷೇತ್ರದಿ ಸನ್ನಿಧಿ ।
ಭಕ್ತರ ಆರಾಧನ ವೇದನಾದದಿ ॥

ಕಿತ್ತಗಾನ ಕ್ಷೇತ್ರದಿ ಕುಮಾರಸ್ವಾಮಿ ।
ಶಕ್ತಿ ಕುವರ ಕೃಪೆ ಅಪಾರ ನಮಾಮಿ ॥

ಸರ್ವೇಶ್ವರಿಯ ಕಂದ ಸ್ಕಂದ ।
ಸರ್ವ ವ್ಯಾಪಕ ಶಕ್ತಿ ಆನಂದ ॥

ಸುಬ್ರಮಣ್ಯ ಸುಗುಣ ರೂಪ ।
ಶುಭ್ರದೇವ ವಿನಾಶ ಪಾಪ ॥

ನಾಗದೇವತೆಗೆ ನಮಾಮಿ ।
ಅಘ ಹರಿಸುವ ಷಣ್ಮುಖಸ್ವಾಮಿ ॥

ಕಾರ್ತಿಕೇಯನೆ ಕರುಣಾಕರ ।
ಆರ್ತಪಾಲನೆ ಹಿಡಿಯೋ ಕರ ॥

ಶರವಣ ಭವನೆ ಶರಣು ಶರಣು ।
ಶರಣಾಗತ ಪಾಲನೆ ಗುಹನೆ ಶರಣು ॥

ವೇಲಾಯುಧನೆ ವರಗಳ ನೀಡು ।
ವೇಳೆವೇಳೆಗೆ ಸ್ಮರಣೆಯ ಕೊಡು ॥

ಪ್ರಣವ ರೂಪನೆ ಮುರುಗಾ ದೇವ ।
ಪ್ರಕರ ಕೇಶವ ಭಗಿನಿಗೆ ಈಯೋ ಸೇವ ॥

■ **ಕೇಶವ ಭಗಿನಿ**

**26677574**



Book-Post

To, ______________________

______________________

______________________


Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com